ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ವೀಕ್ಷಕ ವಿವರಣೆಗಾರ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ಮಾಜಿ ಲೆಗ್‌ಸ್ಪಿನ್ನರ್ ಲಕ್ಷ್ಮಣ್ ಶಿವರಾಮಕೃಷ್ಣನ್ ಅವರು ಶುಕ್ರವಾರ ನವದೆಹಲಿಯಲ್ಲಿ ತಿಳಿಸಿದ್ದಾರೆ.

21 ಮಾರ್ಚ್ 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 10 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಇಂದು ಅಂತರ ರಾಷ್ಟ್ರೀಯ ಅರಣ್ಯ ದಿನ » 2




ಹೊಸ ಆದಾಯ ತೆರಿಗೆ ಕಾಯ್ದೆ : ಅಧಿಸೂಚನೆ » 3



ಮಧ್ಯ ಪ್ರಾಚ್ಯ ಯುದ್ಧ : ಈವರೆಗೆ 6 ಭಾರತೀಯರ ಸಾವು » 4

# ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ

## ಯುದ್ಧ ಭೀತಿಯಿಂದ ವಿದೇಶಿ ಹೂಡಿಕೆ ವಾಪಾಸ್ | ಸಾಮಾನ್ಯ ಜನರ ಮೇಲೆ ನೇರ ಪರಿಣಾಮ ಸಾಧ್ಯತೆ

• ಪ್ರಜೋದಯ ವರದಿ

**ನವದೆಹಲಿ:** ಮಧ್ಯಪ್ರಾಚ್ಯದಲ್ಲಿ ತೀವ್ರಗೊಂಡಿರುವ ಯುದ್ಧ ಮತ್ತು ಆರ್ಥಿಕ ಪರಿಣಾಮಗಳಿಂದಾಗಿ ಭಾರತೀಯ ರೂಪಾಯಿ ಮೌಲ್ಯ ಡಾಲರ್ ಎದುರು ಸಾರ್ವಕಾಲಿಕ ಕುಸಿತ ಕಂಡಿದೆ. ಸದ್ಯದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 93.19ಕ್ಕೆ ತಲುಪಿದೆ.


ಕಚ್ಚಾತೈಲ ಬೆಲೆ ಏರಿಕೆ ಮತ್ತು ಮಧ್ಯಪ್ರಾಚ್ಯದಲ್ಲಿ ತೀವ್ರಗೊಂಡಿರುವ ಯುದ್ಧ ಪರಿಸ್ಥಿತಿ ಈ ಕುಸಿತಕ್ಕೆ ಕಾರಣವಾಗಿದೆ. ಕಚ್ಚಾತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 110 ಡಾಲರ್ ದಾಟಿದ್ದು, ಭಾರತ ತನ್ನ ತೈಲದ ಶೇ.80 ರಷ್ಟನ್ನು ಆಮದು ಮಾಡಿಕೊಳ್ಳುವುದರಿಂದ ಹೆಚ್ಚು ಡಾಲರ್‌ಗಳನ್ನು ಪಾವತಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ.

ಯುದ್ಧದ ಭೀತಿಯಿಂದ ವಿದೇಶಿ ಹೂಡಿಕೆದಾರರು ಭಾರತೀಯ ಷೇರು ಮಾರುಕಟ್ಟೆಯಿಂದ ಹಣ ಹಿಂಪಡೆದು ಡಾಲರ್‌ಗಳಲ್ಲಿ ಹೂಡಿಕೆ ಮಾಡುತ್ತಿರುವುದೂ ಮೌಲ್ಯ ಕುಸಿತಕ್ಕೆ ಕಾರಣವಾಗಿದೆ. ಯುದ್ಧ ಹೀಗೆಯೇ ಮುಂದುವರಿದರೆ 180-200 ಡಾಲರ್ ತಲುಪುವ ಸಾಧ್ಯತೆ ಇದೆ ಎಂದು ಸೌದಿ ಅರೇಬಿಯಾ ಮತ್ತು ಇರಾನ್ ನಂತಹ ದೇಶಗಳು ಎಚ್ಚರಿಕೆ ನೀಡಿವೆ.

ಭಾರತವು ಶೇ.80 ಕ್ಕಿಂತ ಹೆಚ್ಚು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ರೂಪಾಯಿ ಮೌಲ್ಯ ಕುಸಿದಾಗ, ತೈಲ ಕಂಪನಿಗಳು ಹೆಚ್ಚು ಹಣ ಪಾವತಿಸಬೇಕಾಗುತ್ತದೆ, ಇದರಿಂದ ಪೆಟ್ರೋಲ್ ದರ ಏರಿಕೆಯಾಗಲಿದೆ. ಪಾಮ್ ಆಯಿಲ್ ಸೇರಿ ಅನೇಕ ಖಾದ್ಯ ತೈಲಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ. ಹೀಗಾಗಿ ಅಡುಗೆ ಎಣ್ಣೆ ಬೆಲೆ ಏರಿಕೆಯಾಗಲಿದೆ.

ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಟಿವಿ ಮತ್ತು ರೆಫ್ರಿಜರೇಟರ್‌ಗಳ ಬಿಡಿ ಭಾಗಗಳು ವಿದೇಶದಿಂದ ಬರುವುದರಿಂದ ಇವುಗಳ ಬೆಲೆ ಶೇ.5-10 ರಷ್ಟು ಹೆಚ್ಚಾಗಬಹುದು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನವನ್ನು ಡಾಲರ್‌ನಲ್ಲಿ ವ್ಯವಹಾರ ಮಾಡುವುದರಿಂದ ರೂಪಾಯಿ ಕುಸಿತವಾದಾಗ ಭಾರತದಲ್ಲಿ ಚಿನ್ನದ ಬೆಲೆ ಏರಿಕೆಯಾಗುತ್ತದೆ. ವಿದೇಶದಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಶುಲ್ಕ ಮತ್ತು ಪ್ರವಾಸದ ಖರ್ಚು ಡಾಲರ್ ಲೆಕ್ಕದಲ್ಲಿರುವುದರಿಂದ ಪೋಷಕರಿಗೆ ಹೆಚ್ಚಿನ ಹೊರೆಯಾಗಲಿದೆ.

ಹಣದುಬ್ಬರ ಮತ್ತು ದಿನಬಳಕೆಯ ವಸ್ತುಗಳ ಬೆಲೆ ಏರಿಕೆ ಸಾಮಾನ್ಯ ಜನರ ಮೇಲೆ ನೇರ ಪರಿಣಾಮ ಬೀರಲಿದೆ. ರೂಪಾಯಿ ಮೌಲ್ಯ ಮತ್ತಷ್ಟು ಕುಸಿಯುವುದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ » ನಾಲ್ಕನೇ ಪುಟದಲ್ಲಿ



### ಕಚ್ಚಾತೈಲ ಸಾಗಣೆ ಮರುಸ್ಥಾಪನೆಗೆ ಬೇಕು 6 ತಿಂಗಳು

ಕೊಲ್ಲಿ ರಾಷ್ಟ್ರಗಳಿಂದ ಕಚ್ಚಾತೈಲ ಹಾಗು ಗ್ಯಾಸ್ ಸಾಗಣೆ ಮತ್ತೆ ಮರುಸ್ಥಾಪನೆಯಾಗಲು ಆರು ತಿಂಗಳು ಬೇಕಾಗಬಹುದೆಂದು ಅಂತಾರಾಷ್ಟ್ರೀಯ ಇಂಧನ ಸಂಸ್ಥೆಯ ಮುಖ್ಯಸ್ಥ ಫತೀಹ್ ಬಿರೋಲ್ ಶುಕ್ರವಾರ ಹೇಳಿದ್ದಾರೆ. ಇತಿಹಾಸದಲ್ಲಿಯೇ ಇಡೀ ಜಗತ್ತು ಎದುರಿಸುತ್ತಿರುವ ಅತ್ಯಂತ ಭೀಕರ ಇಂಧನ ಬಿಕ್ಕಟ್ಟು ಇದಾಗಿದೆ. ರಾಜಕಾರಣಿಗಳು ಹಾಗು ಮಾರು ಕಟ್ಟೆಯ ತಜ್ಞರು ಈಗ ಉಂಟಾಗಿರುವ ಅಡ್ಡಿಯನ್ನು ಕಡಿಮೆ ಅಂದಾಜು ಮಾಡಿದ್ದರು. ಜಾಗತಿಕವಾಗಿ, ಐದನೇ ಒಂದರಷ್ಟು ಕಚ್ಚಾತೈಲ ಹಾಗು ಅನಿಲ ಸಾಗಣೆ ಇದೇ ಮಾರ್ಗವನ್ನು ಅವಲಂಬಿಸಿದೆಂದು ತಿಳಿಸಿದ್ದಾರೆ.

### ಪ್ರೀಮಿಯಂ ಪೆಟ್ರೋಲ್ 2 ರೂ. ಏರಿಕೆ

ಯುದ್ಧದ ಪರಿಣಾಮ ತೈಲ ಮಾರುಕಟ್ಟೆಗೆ ತಟ್ಟಿದ್ದು, ದೇಶಾದ್ಯಂತ ಪ್ರೀಮಿಯಂ ದರ್ಜೆಯ ಪವರ್ ಪೆಟ್ರೋಲ್ ದರ 2 ರೂ. ಏರಿಕೆ ಮಾಡಲಾಗಿದೆ. ಈ ಬಗ್ಗೆ ಶುಕ್ರವಾರ ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು ಮಹತ್ವದ ನಿರ್ಧಾರ ಕೈಗೊಂಡಿವೆ. ಆದರೆ, ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಬದಲಾವಣೆಯಾಗಿಲ್ಲ.

# ವಿಜೃಂಭಣೆಯಿಂದ ಜರುಗಿದ ಪುರದಮ್ಮ ರಥೋತ್ಸವ

## ಸಾವಿರಾರು ಭಕ್ತರೊಂದಿಗೆ ಸಂಸದ, ಶಾಸಕ ಭಾಗಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಪುರದಮ್ಮ ದೇವಿಯ ಜಾತ್ರಾ ಮಹೋತ್ಸವದ ಅಂಗವಾಗಿ ಶುಕ್ರವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಸೇರಿ ಹಲವು ಗಣ್ಯರು ದೇವಿಯ ದರ್ಶನ ಪಡೆದರು.

ರಥೋತ್ಸವದಲ್ಲಿ ಜಿಲ್ಲೆ ಮಾತ್ರವಲ್ಲದೆ ರಾಜ್ಯದ ನಾನಾ ಭಾಗಗಳಿಂದ ಹೆಚ್ಚಿನ ಸಂಖ್ಯೆಯ ಪುರದಮ್ಮ ದೇವಿಯ ಆರಾಧಕರು ಭಾಗಿಯಾಗಿ ಅಲಂಕೃತ ರಥ ಎಳೆದು ಸಂಭ್ರಮಿಸಿದರು. ಜಾತ್ರೆಯ ಮೊದಲ ದಿನವಾದ ಗುರುವಾರ ಮುಂಜಾನೆ 5 ಗಂಟೆಗೆ ಶ್ರೀ ರಾಮದೇವರ ಹಳ್ಳದಿಂದ ಅಡ್ಡ ಪಲ್ಲಕ್ಕಿ ಉತ್ಸವದ ಮೂಲಕ ಗಂಗೆ ತರುವ ವಿಧಿ ವಿಧಾನಗಳಿಂದ ಜಾತ್ರಾ ಮಹೋತ್ಸವ ಪ್ರಾರಂಭವಾಯಿತು.

2ನೇ ದಿನವಾದ ಶುಕ್ರವಾರ ಮುಂಜಾನೆ 4 ರಿಂದ 5 ಗಂಟೆ ವೇಳೆಗೆ ಶ್ರೀ ಚೌಡೇಶ್ವರಿ-ಪುರದಮ್ಮ ಅವರಿಗೆ ಪೂಜಾ ಕಾರ್ಯಕ್ರಮ ಕೈಗೊಂಡು, ಬೆಳಿಗ್ಗೆ 8 ರಿಂದ 9 ಗಂಟೆ ವೇಳೆಗೆ ರಥೋತ್ಸವ ದೇವಾಲಯದ ಆವರಣದಿಂದ ಬೀಕನಹಳ್ಳಿ ಗ್ರಾಮದೊಳಗೆ, ದೇವಾಲಯದ ಸುತ್ತಲಿನ ರಸ್ತೆ ಮಾರ್ಗವಾಗಿ ಸಾಗಿತು. ಸಂಜೆ 7 ಗಂಟೆಗೆ ಉತ್ಸವ ಮೂರ್ತಿಯ ಮೆರವಣಿಗೆ ದೇವಾಲಯ ಆವರಣದಿಂದ ಸೊಪ್ಪಿನಹಳ್ಳಿ ಗ್ರಾಮದವರೆಗೆ ನಡೆಯಿತು.

ಆ ಗ್ರಾಮದಲ್ಲಿ ಹಿಂದಿನಿಂದ ಜಾತ್ರಾ ಮಹೋತ್ಸವ ನೆರವೇರಿಸುತ್ತಿದ್ದ ಮೂಲ ಕುಟುಂಬಸ್ಥರಿಂದ ಮತ್ತು ಸೇವಾರ್ಥಿಗಳಿಂದ ಧಾರ್ಮಿಕ ವಿಧಿ ವಿಧಾನ ಕಾರ್ಯ ಸೇರಿ ನೆರೆಹೊರೆಯ ಗ್ರಾಮಗಳ ಸಮಸ್ತ ಗ್ರಾಮಸ್ಥರ ಮತ್ತು ಭಕ್ತಾದಿಗಳ ಪಾಲ್ಗೊಳ್ಳುವಿಕೆಯಲ್ಲಿ ಮತ್ತು ಸಹಕಾರದಲ್ಲಿ ಮೆರವಣಿಗೆ ನೆರವೇರಿತು. ರಾತ್ರಿ ಉತ್ಸವ ಮೂರ್ತಿ ಮೆರವಣಿಗೆಯು ದೇವಾಲಯ ಆವರಣಕ್ಕೆ ಬಂದು ಸೇರಿತು. ಜಾತ್ರಾ ಮಹೋತ್ಸವ ಶಾಂತಿ ಮತ್ತು ಸುವ್ಯವಸ್ಥೆಗಳೊಂದಿಗೆ ಪೊಲೀಸ್ ಇಲಾಖೆ ಸಹಕಾರದಲ್ಲಿ ನೆರವೇರಿತು.

ದೇವಾಲಯ ಆಡಳಿತಾಧಿಕಾರಿಗಳಾದ ಯು.ಎಂ. ಪ್ರಕಾಶ್ ಕುಮಾರ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಂಗಸ್ವಾಮಿ, ದರ್ಶನ್, ಪಿಎಸ್‌ಐ ಕುಮಾರ್, ಯಲಗುಂದ ಪಿಡಿಒ ವೇಣು ಗೋಪಾಲ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಯಶಸ್ವಿನಿ, ಆರ್‌ಐ ಯತೀಶ್, ಮುಖಂಡರಾದ ಶಾಂತಾ ರಾಜೇಗೌಡ, ನಾರಾಯಣಗೌಡ, ಶಿವಣ್ಣ, ಸುನಿಲ್ ಪ್ರಕಾಶ್, ಬ್ಯಾಂಕ್ ವ್ಯವಸ್ಥಾಪಕರಾದ ಸೋಮಶೇಖರ್, ವ್ಯವಸ್ಥಾಪನಾ ಸಮಿತಿ ಸದಸ್ಯರು, ಇಲಾಖಾ ಸಿಬ್ಬಂದಿ, ಗ್ರಾಮಸ್ಥರು ಇದ್ದರು.



# ಲೋಕ ಅದಾಲತ್ : 6.18 ಲಕ್ಷ ಪ್ರಕರಣಗಳು ಇತ್ಯರ್ಥ

## 5.98 ಲಕ್ಷ ನೀರು, ಮನೆ ಕಂದಾಯ ವ್ಯಾಜ್ಯ: ನ್ಯಾ. ಹೇಮಾವತಿ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಜಿಲ್ಲೆಯ 6,18,580 ಪ್ರಕರಣಗಳನ್ನು ಬಗೆಹರಿಸಿ, 72, 44, 18,606 ರೂ. ವಸೂಲಿ ಮಾಡಲಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ತಿಳಿಸಿದರು.

ಸುದ್ದಿಗಾರರಿಗೆ ಮಾಹಿತಿ ನೀಡಿದ ಅವರು, ಈ ವರ್ಷ ನಡೆದ ಮೊದಲ ರಾಷ್ಟ್ರೀಯ ಲೋಕ ಅದಾಲತ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಜಿಲ್ಲೆಯ 42 ನ್ಯಾಯಾಲಯಗಳ 95,402 ಪ್ರಕರಣಗಳ ಪೈಕಿ, ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ 7,998 ಪ್ರಕರಣಗಳು ಹಾಗು 6,21, 730 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಗುರುತಿಸಲಾಗಿತ್ತು. ನ್ಯಾಯಾಲಯದಲ್ಲಿ ಬಾಕಿ ಉಳಿದಿದ್ದ 4,262 ಪ್ರಕರಣಗಳು ಹಾಗು 6,14, 318 ವ್ಯಾಜ್ಯಪೂರ್ವ ಪ್ರಕರಣಗಳು ಇತ್ಯರ್ಥ ಗೊಳಿಸಲಾಗಿದೆ ಎಂದರು.

ಲೋಕ ಅದಾಲತ್‌ನಲ್ಲಿ 73 ಬಗೆಹರಿಸಬಹುದಾದ ಕ್ರಿಮಿನಲ್ ಪ್ರಕರಣಗಳು, 285 ಚೆಕ್ ಬೌನ್ಸ್ , 142 ಬ್ಯಾಂಕ್ ರಿಕವರಿ, 54 ವಿದ್ಯುತ್ ಕಾಯ್ದೆ, 36 ಭೂಸ್ವಾಧೀನ, 250 ಮೋಟರ್ ವಾಹನ ಪರಿ ಹಾರ ಪ್ರಕರಣಗಳು, 53 ಕೌಟುಂಬಿಕ , 496 ಇತರೆ ಸಿವಿಲ್ ಪ್ರಕರಣಗಳು, 2,222 ಇತರೆ ಕ್ರಿಮಿನಲ್ ಪ್ರಕರಣಗಳು, ಆರು ಕಾರ್ಮಿಕ , 645 ಜನನ ನೋಂದಣಿ ಪ್ರಕರಣಗಳು ಎಲ್ಲವೂ ಸೇರಿ ಒಟ್ಟು 4,262 ನ್ಯಾಯಾಲಯದ ಪ್ರಕರಣ ಗಳಾಗಿವೆ ಎಂದು ತಿಳಿಸಿದರು.

238 ವ್ಯಾಜ್ಯ ಪೂರ್ವ ಬ್ಯಾಂಕ್ ಸಾಲ ಮರುಪಾವತಿ ಪ್ರಕರಣಗಳು, 15,364 ಸಂಚಾರಿ ನಿಯಮ ಉಲ್ಲಂಘನೆ, 2 ಗ್ರಾಹಕರ ನ್ಯಾಯಾಲಯದ ಪ್ರಕರಣಗಳು, 5,98,714 ನೀರಿನ ಮತ್ತು ಮನೆ ಕಂದಾಯದ ಪ್ರಕರಣಗಳು ಸೇರಿ 6,14,318 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗಿದೆ. ರಾಷ್ಟ್ರೀಯ ಲೋಕ ಅದಾಲತ್‌ನಿಂದ ಕಕ್ಷಿದಾರರಿಗೆ ಹಣ, ಸಮಯದ ಉಳಿತಾಯವಾಗಿದ್ದು ಅನುಕೂಲವಾಗಿದೆ ಎಂದು ತಿಳಿಸಿದರು.

> **ಲೋಕ ಅದಾಲತ್‌ನಲ್ಲಿ ಬೇರೆಯಾಗಿದ್ದ ಎರಡು ಜೋಡಿಗಳನ್ನು ಒಂದು ಮಾಡಲಾಗಿದೆ. 61 ಐದು ವರ್ಷಕ್ಕೂ ಮೇಲ್ಪಟ್ಟ ಹಳೆಯ ಪ್ರಕರಣ ಗಳು, 41 ಹಿರಿಯ ನಾಗರಿಕರ ವಿವಿಧ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ.**
> **- ಹೇಮಾವತಿ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶೆ**



# ನಮ್ಮ- ಗೌಡರ ಕುಟುಂಬದ ಮಧ್ಯೆ ಒಡಕು ಸೃಷ್ಟಿಸುವ ಯತ್ನ

## ಪೆನ್‌ಡ್ರೈವ್ ಹಂಚಿಕೆ ಪ್ರಕರಣದ ಚಾರ್ಜ್‌ಶೀಟ್ ಬಗ್ಗೆ ಶಾಸಕ ಸ್ವರೂಪ್ ಆಕ್ಷೇಪ

• ಪ್ರಜೋದಯ ವರದಿ

**ಹಾಸನ:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಅಶ್ಲೀಲ ವಿಡಿಯೋ ಇರುವ ಪೆನ್‌ಡ್ರೈವ್ ಹಂಚಿಕೆ ಪ್ರಕರಣ ಸಂಬಂಧ ಎಸ್‌ಐಟಿ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಉದ್ದೇಶ ಪೂರ್ವಕವಾಗಿ ಜೆಡಿಎಸ್ ಕಾರ್ಯಕರ್ತರ ಹೆಸರು ಸೇರಿಸಿದ್ದು, ನಮ್ಮ ಹಾಗು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಕುಟುಂಬದ ನಡುವೆ ಒಡಕು ಸೃಷ್ಟಿಸುವ ಪ್ರಯತ್ನ ನಡೆದಿದೆ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಜೆಡಿಎಸ್‌ನ ಸುಮಾರು 10 ರಿಂದ 12 ಕಾರ್ಯಕರ್ತರನ್ನು ದೋಷಿಗಳನ್ನಾಗಿಸಲಾಗಿದೆ. ಪೆನ್‌ಡ್ರೈವ್ ಹಂಚಿಕೆ ಮಾಡಿರುವ ಪ್ರಭಾವಿಗಳು ಆರಾಮಾಗಿದ್ದಾರೆ. ಎಸ್‌ಐಟಿ ಪಾರದರ್ಶಕ ತನಿಖೆ ನಡೆಸಿದ್ದರೆ ಈ ಪ್ರಮಾದ ಆಗುತ್ತಿರಲಿಲ್ಲ. ನಿಜವಾದ ಆರೋಪಿಗಳನ್ನು ಚಾರ್ಜ್‌ಶೀಟ್‌ನಿಂದ ಕೈ ಬಿಟ್ಟಿರುವುದಕ್ಕೆ ಅಸಮಾಧಾನವಿದೆ ಎಂದರು.

1983ರಿಂದ ನಮ್ಮ ಹಾಗು ದೇವೇಗೌಡರ ಕುಟುಂಬ ನಡುವೆ ಗಟ್ಟಿ ಬಾಂಧವ್ಯ ಇದೆ. ನಮ್ಮ ತಂದೆ ಹೆಚ್.ಎಸ್.ಪ್ರಕಾಶ್ ಅವರು ನಗರ ಸಭೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದಾಗ ದೇವೇಗೌಡರು ಲೋಕೋ ಪಯೋಗಿ ಸಚಿವರಾಗಿದ್ದರು. ಆಗಿನಿಂದಲೂ ನಾವು ಸಹೋದರರಂತೆ ಇದ್ದೇವೆ. 1994 ರಿಂದ ನಮ್ಮ ಕುಟುಂಬದ ಮೇಲೆ ದೇವೇಗೌಡರು ಹಾಗು ಕುಟುಂಬಸ್ಥರು ಇಟ್ಟಿರುವ ನಂಬಿಕೆಯನ್ನು ಹುಸಿಗೊಳಿಸಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮ ನಡುವೆ ಕಲಹ ಸೃಷ್ಟಿಸುವ ಅವರ ಪ್ರಯತ್ನ ಯಾವ ಕಾರಣಕ್ಕೂ ಈಡೇರುವುದಿಲ್ಲ. ಮಾಜಿ ಸಚಿವ ಹೆಚ್.ಡಿ.ರೇವಣ್ಣ ಹಾಗು ನಮ್ಮ ನಡುವಿನ ಸಂಬಂಧ ಹಾಳು ಮಾಡಲು ಈ ಪ್ರಯತ್ನ ನಡೆದಿರಬಹುದೆಂದರು.

**ಮಂಪರು ಪರೀಕ್ಷೆಗೆ ಒಳಪಡಿಸಿ**

ಲೋಕಸಭೆ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಸೋಲಿಸುವ ಉದ್ದೇಶದಿಂದ ನಡೆಸಿದ ಪ್ರಯತ್ನ ಇದಾಗಿದೆ. ಪ್ರಕರಣದ ಎ1 ಆರೋಪಿಯಾಗಿರುವ ನವೀನ್ ಎಂಬಾತನನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ ಸತ್ಯ ತಿಳಿಯುತ್ತದೆ. ರಾಜಕೀಯ ದ್ವೇಷದಿಂದ ನಮ್ಮ ಕಾರ್ಯಕರ್ತರನ್ನು ಗುರಿಯಾಗಿಸಿ ಚಾರ್ಜ್‌ಶೀಟ್‌ನಲ್ಲಿ ಹೆಸರು ಸೇರಿಸಲಾಗಿದೆ. ಎಸ್‌ಐಟಿ ತನಿಖೆ ಮೇಲೆ ನಮಗೆ ನಂಬಿಕೆ ಇಲ್ಲ. ತನಿಖೆ ದಿಕ್ಕುತಪ್ಪಿಸಲು ಈ ರೀತಿ ಮಾಡಿದ್ದಾರೆಂದರು.

ಕೆಟ್ಟ ಕಾಂಗ್ರೆಸ್ ಸರ್ಕಾರ ಜೆಡಿಎಸ್ ಪಕ್ಷವನ್ನು ನಾಶಪಡಿಸಲು ಇಷ್ಟೆಲ್ಲಾ ಪ್ರಯತ್ನ ಮಾಡಿದೆ. ಆದರೂ ನಾವು ಜನತಾ ಸಮಾವೇಶದ ಮೂಲಕ ಶಕ್ತಿ ಪ್ರದರ್ಶಿಸಿದ್ದೇವೆ. ಪೆನ್‌ಡ್ರೈವ್ ವಿಚಾರದಲ್ಲಿ ನಮ್ಮ ಚಿಕ್ಕಪ್ಪನ ಮಗ ಹೆಚ್. ರೇವಂತ್ ಆಸ್ಟ್ರೇಲಿಯಾದಲ್ಲಿ ವ್ಯಾಸಂಗ ಮಾಡಿ ತನ್ನದೇಯಾದ ಉದ್ಯಮದ ಮೂಲಕ ಬದುಕು ಕಟ್ಟಿಕೊಂಡಿದ್ದಾನೆ. ಸಂಬಂಧ ಇಲ್ಲದ ವರನ್ನು ದೋಷಿಗಳನ್ನಾಗಿಸಿರುವುದು ಯಾವ ತನಿಖೆ. ಪ್ರಕರಣದ ಎ3, ಎ4 ಸೇರಿ ಅನೇಕರ ಹೆಸರು ಕೈಬಿಟ್ಟಿರುವುದು ಭಾರೀ ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದು ಹರಿಹಾಯ್ದರು.

ಜೆಡಿಎಸ್ ತಾಲ್ಲೂಕಾಧ್ಯಕ್ಷ ಎಸ್. ದ್ಯಾವೇಗೌಡ, ಮುಖಂಡರಾದ ಶಬ್ಬೀರ್ ಅಹ್ಮದ್, ರಘು ಹೊಂಗೆರೆ, ಮಧು ಪಟೇಲ್, ಶಿವಣ್ಣ, ವಿಜಯಕುಮಾರ್ ಇದ್ದರು.



### ತೆಂಗಿನ ಮರದಿಂದ ಬಿದ್ದು ಯುವಕ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಎಳ ನೀರು ಕೀಳಲು ತೆಂಗಿನ ಮರ ಹತ್ತಿದ್ದ ಯುವಕ ಆಯಾತಪ್ಪಿ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ತಾಲ್ಲೂಕಿನ ಅಣ್ಣೇನಹಳ್ಳಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ಅಭಿಷೇಕ್ (23) ಮೃತರು. ಎಳನೀರು ಕೀಳುವಾಗ ಏಕಾಏಕಿ ಭಾರೀ ಎತ್ತರದಿಂದ ಕೆಳಗೆ ಬಿದ್ದಿದ್ದ ಎಂದು ತಿಳಿದುಬಂದಿದೆ. ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



# ಕೊಲೆ ಆರೋಪಿ ಪುಟ್ಟರಾಜ್‌ಗೆ ಜೀವಾವಧಿ ಶಿಕ್ಷೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಕಳೆದ 16 ವರ್ಷಗಳ ಹಿಂದೆ ಪಟ್ಟಣದಲ್ಲಿ ಕೊಲೆಯಾಗಿದ್ದ ತ್ರಿನೇಶ್ ಕೊಲೆ ಪ್ರಕರಣದ ಆರೋಪಿ ಪುಟ್ಟರಾಜ್ (ಪುಟ್ಟಿ)ಮತ್ತು ಗ್ಯಾಂಗ್‌ಗೆ ಜಿಲ್ಲಾ ನ್ಯಾಯಾಲಯ ವಿಧಿಸಿದ್ದ ಜೀವಾ ವಧಿ ಶಿಕ್ಷೆಯನ್ನು ಹೈಕೋರ್ಟ್ ಭಾಗಶ: ಎತ್ತಿ ಹಿಡಿದಿದೆ.

ಪಟ್ಟಣದ ದೊಡ್ಡ ಮಸೀದಿ ಬೀದಿಯ ಗಲ್ಲಿಯೊಂದರಲ್ಲಿ 2009ರ ಡಿ.9 ರಂದು ತ್ರಿನೇಶ್ ಮೇಲೆ ಮಚ್ಚು, ಲಾಂಗ್‌ಗಳಿಂದ ಮಾರಣಾಂತಿಕ ವಾಗಿ ಹಲ್ಲೆ ನಡೆದಿತ್ತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಆತನನ್ನು ಪಟ್ಟಣದ ಆಸ್ಪತ್ರೆ, ನಂತರ ಬೆಂಗಳೂರಿನ ನಿಮ್ಹಾನ್ಸ್‌ಗೂ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ಡಿ.11 ರಂದು ಮೃತಪಟ್ಟಿದ್ದ. ಅಂದಿನಿಂದ ಈ ವರೆಗೆ ನ್ಯಾಯಾಲಯದ ನಾನಾ ಹಂತದಲ್ಲಿ ಪ್ರಕರಣದ ವಿಚಾರಣೆ ನಡೆದಿತ್ತು. 2017ರಲ್ಲಿ ಜಿಲ್ಲಾ ನ್ಯಾಯಾಲಯ ಎಲ್ಲಾ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿತ್ತು.

ಶಿಕ್ಷೆ ರದ್ದುಪಡಿಸುವಂತೆ ಕೋರಿ ಆರೋಪಿಗಳು ಮೇಲ್ಮನವಿ, ಜಾಮೀನು ಇವುಗಳ ಕಾನೂನಾತ್ಮಕ ಹೋರಾಟ ನಡೆಸಿದ್ದರು. ಅದೆಲ್ಲದಕ್ಕೂ ಇದೀಗ ತೆರೆ ಬಿದ್ದಿದೆ. ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಮತ್ತೆ ಜಾಮೀನು ಕೋರುವ ಪ್ರಯತ್ನದಲ್ಲಿದ್ದಾಗಲೇ ಹೈಕೋರ್ಟ್ ಪುಟ್ಟರಾಜ್ (ಪುಟ್ಟಿ) ಮತ್ತು ಐವರಿಗೆ ಜೀವಾವಧಿ ಶಿಕ್ಷೆವಿಧಿಸಿ ಆದೇಶ ನೀಡಿದೆ.

**ಪ್ರಕರಣ ಹಿನ್ನಲೆ:** ಬೈಕ್ ರೇಸ್ ಆಯೋಜನೆ, ಮತ್ತಿತರ ಸಣ್ಣಪುಟ್ಟ ಕೆಲಸಮಾಡಿಕೊಂಡು ಕಾನೂನು ಬಾಹಿರ ಕೃತ್ಯಗಳಲ್ಲಿ ಭಾಗಿಯಾಗಿದ್ದ ತ್ರಿನೇಶ್ ಬೈಕ್ ರೇಸ್ ಆಯೋಜಿಸಿದ್ದ. ಅದಕ್ಕೆ ಪೊಲೀಸರು ಸಮ್ಮತಿ ನಿರಾಕರಿಸಿದ್ದರು. ಅದಕ್ಕೆ ಆಕ್ರೋಶಗೊಂಡಿದ್ದ ತ್ರಿನೇಶ್‌ನು ಪುಟ್ಟರಾಜ್ ವಿರುದ್ಧ ವಾಗ್ವಾಳಿ ನಡೆಸಿದ್ದ. ಪಟ್ಟಣದ ಕೋಟೆ ದಾಸಗೌಡರ ಬೀದಿಯ ನಿವಾಸಿಗರಾಗಿದ್ದ ತ್ರಿನೇಶ್ ಮತ್ತು ಪುಟ್ಟರಾಜ್ ಎದುರು-ಬದರು ಮನೆಯಲ್ಲಿದ್ದರು. ಬೈಕ್ ರೇಸ್ ವಿಚಾರವಾಗಿ ನಡೆದಿದ್ದ ಗಲಾಟೆ ವೈಷಮ್ಯಕ್ಕೆ ಕಾರಣವಾಗಿತ್ತು. ಕೆಲವು ದಿನಗಳ ಬಳಿಕ ಅದು ತ್ರಿನೇಶ್‌ನ ಕೊಲೆಯಲ್ಲಿ ಅಂತ್ಯವಾಗಿತ್ತು.

# ಹಣಕಾಸಿನ ವೈಷಮ್ಯ : ಯುವಕನ ಹತ್ಯೆ

• ಪ್ರಜೋದಯ ವರದಿ

**ಹಾಸನ:** ಹಣಕಾಸಿನ ವಿಚಾರಕ್ಕೆ ಸ್ನೇಹಿತನನ್ನು ಕೂಡಿ ಹಾಕಿದ್ದ ಯುವಕರು ಥಳಿಸಿ ಕೊಲೆಗೈದಿದ್ದು ಮಾತ್ರವಲ್ಲದೆ ಸಾಕ್ಷ್ಯ ನಾಶಕ್ಕಾಗಿ ಮೃತದೇಹವನ್ನು ಸುಟ್ಟು ಹಾಕಿರುವ ಘಟನೆ ದುದ್ದ ಹೋಬಳಿ ಹಂಗರಹಳ್ಳಿ ಸಮೀಪ ನಡೆದಿದೆ. ಗಂಡಸಿ ಹೋಬಳಿ ಕಾಡಯ್ಯನ ಕೊಪ್ಪಲು ಗ್ರಾಮದ ವರುಣ್ (22) ಮೃತ. ಸ್ನೇಹಿತರಾದ ಶಶಾಂಕ್, ಸತೀಶ, ಕಿರಣ್, ಅಭಿ, ಜೀವನ್, ಚೇತನ್, ಗಜ, ಪೃಥ್ವಿಕ್ ಎಂಬುವವರು ಒಟ್ಟಾಗಿ ಹಲ್ಲೆ ನಡೆಸಿದ್ದಾರೆಂದು ತಿಳಿದು ಬಂದಿದೆ. ಈ ಸಂಬಂಧ ಆರೋಪಿ ಯೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಮಾ.10ರಂದು ಬೈಕ್ ರಿಪೇರಿ ಮಾಡಿಸಿಕೊಂಡು ಬರುವುದಾಗಿ ಗಂಡಸಿಗೆ ಹೋಗಿದ್ದ ವರುಣ್ ಸಂಜೆಯಾದರೂ ವಾಪಾಸ್ ಬಂದಿರಲಿಲ್ಲ. ಕುಟುಂಬಸ್ಥರು ನಾಲ್ಕೈದು ದಿನ ಹುಡಕಾಟ ನಡೆಸಿದರೂ ಪತ್ತೆಯಾಗದ ಹಿನ್ನಲೆಯಲ್ಲಿ ಮಾ.15ರಂದು ಗಂಡಸಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

ವರುಣ್‌ನ ಜೊತೆಗೆ ಇರುತ್ತಿದ್ದ ಸ್ನೇಹಿತರು ಏಕಾಏಕಿ ನಾಪತ್ತೆಯಾಗಿದ್ದರಿಂದ ಪೊಲೀಸರು ವಿಚಾರಿಸಿದಾಗ ಕೊಲೆ ರಹಸ್ಯ ಬಯಲಾಗಿದೆ. ವರುಣ್ ಮತ್ತು ಹಾಸನದ ಶಶಾಂಕ್ ನಡುವೆ ಹಣಕಾಸಿನ ವೈಷಮ್ಯವಿತ್ತು. ಇದೇ ವಿಚಾರಕ್ಕೆ ಮಾ.10ರಂದು ಶಶಾಂಕ್ ತನ್ನ ಸ್ನೇಹಿತ ಹಂಗರಹಳ್ಳಿಯ ಕಿರಣ್‌ನ ತೋಟದ ಮನೆಗೆ ವರುಣ್‌ನನ್ನು ಕರೆದುಕೊಂಡು ಬಂದು ಮಾರಕಾಸ್ತ್ರಗಳಿಂದ ಹೊಡೆದು ಗಂಭೀರ ಗಾಯಗೊಳಿಸಿದ್ದರು. ನಂತರ ಶಶಾಂಕ್‌ನ ಮನೆಗೆ ಕರೆ ತಂದು ಅಲ್ಲಿಯೂ ಚಾಕುವಿನಿಂದ ಇರಿದು ಕೊಲೆ ಮಾಡಿ, ಸಾಕ್ಷ್ಯ ನಾಶಕ್ಕಾಗಿ ಮೃತದೇಹವನ್ನು ಜೇನುಕಲ್ ಸಿದ್ದೇಶ್ವರಸ್ವಾಮಿ ಬೆಟ್ಟದ ಹಿಂಭಾಗ ಹಾಕಿ ಶವಕ್ಕೆ ಬೆಂಕಿ ಹಚ್ಚಿ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ದುದ್ದ ಠಾಣೆ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಜಿಲ್ಲೆಯಲ್ಲಿವೆ 83 ಶಾಲೆಗಳು | ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆ | ಮಕ್ಕಳ ಹಾಜರಾತಿಯೂ ಉತ್ತಮ

# ಶತಮಾನ ಪೂರೈಸಿರುವ ಶಾಲೆಗಳಿಗೆ ಬೇಕಿದೆ ಕಾಯಕಲ್ಪ

ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ನೂರು ವರ್ಷ ಪೂರೈಸಿರುವ 83 ಸರ್ಕಾರಿ ಕಿರಿಯ ಹಾಗು ಹಿರಿಯಪ್ರಾಥಮಿಕ ಶಾಲೆಗಳಿದ್ದು, ಅವುಗಳ ಅಭಿವೃದ್ಧಿಗೆ ಸರ್ಕಾರ ಕಾಯಕಲ್ಪ ತೋರಬೇಕಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಅಸ್ತಿತ್ವ ಪಡೆದ ಶಾಲೆಗಳಿಗೆ ತನ್ನದೇಯಾದ ಮಹತ್ವವಿದೆ. ಇಂದಿಗೂ ಅನೇಕ ಶಾಲೆಗಳಲ್ಲಿ 400ಕ್ಕಿಂತ ಅಧಿಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಮತ್ತೆ ಕೆಲವೆಡೆ ಕಟ್ಟಡ ಶಿಥಿಲಾವಸ್ಥೆ ತಲುಪಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಅನೇಕರು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿದ್ದಾರೆ. ಈ ಹಿನ್ನಲೆಯಲ್ಲಿ ಸರ್ಕಾರ ಶತಮಾನ ಪೂರೈಸಿದ ಶಾಲೆಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ. ಅದರಲ್ಲೂ ದುರಸ್ತಿ ಕಾಮಗಾರಿ ಆಗಲೇಬೇಕಿರುವ 27 ಶಾಲೆಗಳಿಗೆ ತಲಾ 1 ಕೋ.ರೂ. ಅನುದಾನ ನೀಡುವಂತೆ ಎರಡು ತಿಂಗಳ ಹಿಂದೆಯೇ ಮನವಿ ಸಲ್ಲಿಸಲಾಗಿದೆ. ಆದರೆ, ಈ ವರೆಗೆ ಅನುದಾನ ಬಿಡುಗಡೆ ಕುರಿತು ಭರವಸೆ ಸಿಕ್ಕಿಲ್ಲ.

**ಶತಮಾನ ಪೂರೈಸಿರುವ ಶಾಲೆಗಳು**

ಜಿಲ್ಲೆಯಲ್ಲಿ 2442 ಸರ್ಕಾರಿ ಶಾಲಾ ಕಟ್ಟಡಗಳಿದ್ದು, 83 ಶಾಲೆಗಳು ಆರಂಭವಾಗಿ ನೂರು ವರ್ಷ ಪೂರ್ಣಗೊಳಿಸಿರುವುದು ಹೆಮ್ಮೆಯ ವಿಚಾರ. ಆಲೂರಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮರಸು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಲೂರಿನ ನೂತನ ಹಿರಿಯ ಪ್ರಾಥಮಿಕ ಶಾಲೆ, ಸಿಂಗಾಪುರ, ದೊಡ್ಡಕಣಗಾಲು, ಅರಕಲಗೂಡು ತಾಲ್ಲೂಕಿನ ದುಮ್ಮಿಕೊಪ್ಪಲು ಸರ್ಕಾರಿ ಶಾಲೆ, ಅರಕಲಗೂಡು ಪೇಟೆ, ಮುಸವತ್ತೂರು, ಕೊಳ್ಳಂಗಿ, ಬೆಳವಾಡಿ, ಕೋಟೆ ಅರಕಲಗೂಡು, ಕೊಣನೂರು, ಕೊರಟೀಕೆರೆ, ಮಲ್ಲಿಪಟ್ಟಣ, ಅರಸೀಕೆರೆ ತಾಲ್ಲೂಕಿನ ಕುರುವಂಕ, ಬೆಂಗುಂಬ, ಕಣಕಟ್ಟೆ, ಡಿ.ಎಂ.ಕುರ್ಕೆ, ಕಾಮಸಮುದ್ರ, ಹರಳಕಟ್ಟೆ, ಮಾಡಾಳು, ಸಶಿವಾಳ, ಜೆ.ಸಿ.ಪುರ, ಯರೇಹಳ್ಳಿ, ಉಂಡಿಗನಾಳು, ನೇರ್ಲಗೆ, ಜಾವಗಲ್, ಹಂದ್ರಾಳು, ಬಿ.ಹೆಚ್.ರಸ್ತೆ, ಕೆಲ್ಲಂಗೆರೆ, ನಾಗರಹಳ್ಳಿ, ಚಗಚಗೆರೆ, ಬಾಣಾವರ, ಹಾರನಹಳ್ಳಿ, ಕಲ್ಗುಂಡಿ, ಅರಸೀಕೆರೆ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಅಗ್ಗುಂದ, ಬೇಲೂರು ತಾಲ್ಲೂಕಿನಲ್ಲಿ ಜಿಹೆಚ್‌ಪಿಎಸ್ ಕೋಟೆ ಶಾಲೆ, ಅರೇಹಳ್ಳಿ ಜಿಯುಹೆಚ್‌ಪಿಎಸ್, ಹಳೇಬೀಡು ಜಿಹೆಚ್‌ಪಿಎಸ್, ಕೋಟೆ ಬೇಲೂರು, ಮುತ್ತುಗನ್ನೆ, ಬಂಟೇನಹಳ್ಳಿ, ಅಡಗೂರು, ಗೋಣಿಸೋಮನಹಳ್ಳಿ, ಚಿಲ್ಕೂರು, ಕೆಸಗೋಡು, ಜಿಹೆಚ್‌ಪಿಎಸ್ ಅರೇಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚನ್ನರಾಯಪಟ್ಟಣ ಬಿಇಒ ಹಿಂಭಾಗದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ನುಗ್ಗೇಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆ, ಶ್ರವಣಬೆಳಗೊಳ, ಮತಿಗಟ್ಟ ಶಾಲೆ, ಹಾಸನದ ವಾಣಿವಿಲಾಸ, ಮಲ್ಲದೇವರಪುರ, ಶಾಂತಿಗ್ರಾಮ, ಶಂಕರನಹಳ್ಳಿ, ಆರ್‌ಸಿ ರಸ್ತೆ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಪ್ರಧಾನ ಸ.ಹಿ.ಪ್ರಾ. ಶಾಲೆ, ಹೆರಗು, ದೊಡ್ಡಗೇಣಿಗೆರೆ, ಅಮಿರ್ ಮೊಹಲ್ಲಾ ಕಿರಿಯ ಪ್ರಾಥಮಿಕ ಶಾಲೆ, ಹೊಳೆನರಸೀಪುರ ತಾಲ್ಲೂ ಕಿನ ನಗರನಹಳ್ಳಿ, ಕ್ಯಾತನಹಳ್ಳಿ, ಬಾಗೀವಾಳು, ಹಿರೇಬೆಳಗುಲಿ, ಹರದನಹಳ್ಳಿ, ತಾತನಹಳ್ಳಿ, ಜಿಕೆಬಿಎಂಎಸ್, ಮೂಡಲಹಿಪ್ಪೆ, ದಾಳಗೌಡನ ಹಳ್ಳಿ, ಜಿಎಂಹೆಚ್‌ಪಿಎಸ್ ಹಳ್ಳಿ ಮೈಸೂರು, ನಿಡುವಣಿ, ಸಕಲೇಶಪುರ ತಾಲ್ಲೂ ಕಿನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಹಾನುಬಾಳು, ಬೆಳಗೋಡು, ದೇವಾಲಯದ ಕೆರೆ, ಉದೇವಾರ, ಬೆಳಗೋಡು, ಗೊಳ ಗೊಂಡೆ, ಅರೆಕೆರೆ, ಈಶ್ವರಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯು ಆರಂಭವಾಗಿ ನೂರು ವರ್ಷ ಪೂರೈಸಿದ್ದು ಹೆಮ್ಮೆಯ ವಿಚಾರವಾಗಿದೆ.

**ಕಟ್ಟಡ ಕಾಮಗಾರಿಗೆ ಬೇಕಿದೆ ಆದ್ಯತೆ**

ಪ್ರಸ್ತುತ ದಿನಗಳಲ್ಲಿ ಸರ್ಕಾರಿ ಶಾಲೆಗಳು ಮುಚ್ಚುವ ಹಂತ ತಲುಪಿವೆ. ಖಾಸಗಿ ಶಾಲೆಗಳ ವ್ಯಾಮೋಹದಿಂದ ಪೋಷಕರು ಸಹ ಸರ್ಕಾರಿ ಶಾಲೆಗಳಿಂದ ತಮ್ಮ ಮಕ್ಕಳನ್ನು ವಿಮುಖರನ್ನಾಗಿಸುತ್ತಿದ್ದಾರೆ. ಇಂತಹ ಸವಾಲಿನ ನಡುವೆಯೂ ಬಡ ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಬೇಕೆಂಬ ಉದ್ದೇಶದಿಂದ ಶಿಕ್ಷಕರು ಸಾಕಷ್ಟು ಪರಿಶ್ರಮದಿಂದ ಶಾಲೆ ಉಳಿಸಿಕೊಳ್ಳಲು ನಿತ್ಯ ಪ್ರಯತ್ನಿಸುತ್ತಲೇ ಇದ್ದಾರೆ. ಆದರೆ, ಕೆಲವೆಡೆ ಕಟ್ಟಡಗಳು ಸಂಪೂರ್ಣ ಶಿಥಿಲಾವಸ್ಥೆ ತಲುಪಿವೆ. ವಾರ್ಷಿಕವಾಗಿ ದೊರೆಯುವ ಅನುದಾನದಿಂದ ಅಲ್ಪಸ್ವಲ್ಪ ಕಾಮಗಾರಿ ಕೈಗೊಳ್ಳಲಾಗುತ್ತದೆಯಾದರೂ ಪೂರ್ಣ ಕೆಲಸಕ್ಕೆ ಹೆಚ್ಚುವರಿ ಅನುದಾನದ ಅವಶ್ಯಕತೆ ಹೆಚ್ಚಿದೆ. ತರಗತಿ ಕೊಠಡಿ, ಅಡುಗೆ ಮನೆ, ಕಾಂಪೌಂಡ್, ಕಿಟಕಿಗಳ ನಿರ್ವಹಣೆ, ಆಟದ ಮೈದಾನ ಹೀಗೆ ನಾನಾ ಕೆಲಸಗಳು ತುರ್ತಾಗಿ ಆಗಬೇಕಿದೆ.



> **ಜಿಲ್ಲೆಯಲ್ಲಿ ಶತಮಾನ ಪೂರೈಸಿದ 83 ಸರ್ಕಾರಿ ಶಾಲೆಗಳಿದ್ದು, ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಹಳೆಯ ಶಾಲೆಗಳಿಗೆ ದುರಸ್ತಿ ಕಾಮಗಾರಿ ಅಗತ್ಯವಿರುವುದರಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.**
> **-ಚಂದ್ರಶೇಖರ್, ಶಿಕ್ಷಣಾಧಿಕಾರಿ**

### ಕೆಲ ಶಾಲೆಗಳಲ್ಲಷ್ಟೇ ಸಂಭ್ರಮ

ಸರ್ಕಾರಿ ಶಾಲೆಯೊಂದು ಆರಂಭವಾಗಿ ನೂರು ವರ್ಷ ಪೂರೈಸಿದ್ದಕ್ಕೆ ಶತಮಾನೋತ್ಸವ, ಗುರು ವಂದನೆ, ಪ್ರತಿಭಾ ಪುರಸ್ಕಾರದಂತಹ ಕಾರ್ಯಕ್ರಮಗಳ ಮೂಲಕ ಶಾಲೆಯ ಘನತೆ ಹೆಚ್ಚಿಸುವ ಕೆಲಸಗಳು ಹಳೆಯ ವಿದ್ಯಾರ್ಥಿಗಳು ಹಾಗು ಶಿಕ್ಷಕರಿಂದ ನಡೆಯುತ್ತವೆ. ಆದರೆ, ದಾಖಲಾತಿ ಕಡಿಮೆ ಇರುವ, ನಗರ ಅಥವಾ ಪಟ್ಟಣಗಳಿಂದ ದೂರವಿರುವ ಶಾಲೆಗಳಿಗೆ ಈ ಭಾಗ್ಯ ಇಲ್ಲದಾಗಿದೆ. ಕುಗ್ರಾಮದಲ್ಲಿರುವ ಶತಮಾನ ಪೂರೈಸಿರುವ ಶಾಲೆಗಳತ್ತ ಸರ್ಕಾರ ಹಾಗು ಜನಪ್ರತಿನಿಧಿಗಳು ಗಮನ ಹರಿಸಬೇಕಿದೆ.



# ಇಂದು ಅಂತರರಾಷ್ಟ್ರೀಯ ಅರಣ್ಯ ದಿನ

**ಗ್ರಹವನ್ನು ರಕ್ಷಿಸಲು ನಾವು ನಮ್ಮ ಕಾಡುಗಳನ್ನು ನೋಡಿಕೊಳ್ಳುತ್ತೇವೆ.**




ಪ್ರಕೃತಿ ಅಂತರರಾಷ್ಟ್ರೀಯ ಅರಣ್ಯ ದಿನದ ಹಿನ್ನೆಲೆಯಲ್ಲಿ, ಪರಿಸರದ ಬಗ್ಗೆ ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ.

ಅರಣ್ಯಗಳನ್ನು ಗ್ರಹದ ಶ್ವಾಸಕೋಶಗಳೆಂದು ಪರಿಗಣಿಸಲಾಗುತ್ತದೆ. ಮರಗಳು ಸಿಒ2 ಅನ್ನು ಕಡಿಮೆ ಮಾಡುವ ಮೂಲಕ ಗಾಳಿಯನ್ನು ಶುದ್ಧೀಕರಿಸುತ್ತವೆ ಮತ್ತು ಹವಾಮಾನವನ್ನು ನಿಯಂತ್ರಿಸಲು ಸಹಾಯ ಮಾಡುತ್ತವೆ. ಭೂಮಿಯ ಮೇಲಿನ ಜೀವವನ್ನು ಉಳಿಸಿಕೊಳ್ಳಲು ಅವು ಅತ್ಯಗತ್ಯ ಮತ್ತು ಹವಾಮಾನ ಬದಲಾವಣೆಯನ್ನು ಎದುರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆದಾಗ್ಯೂ, ಅರಣ್ಯನಾಶ ಮತ್ತು ಅವನತಿಯ ಬೆದರಿಕೆಯು ವಿಶ್ವಾದ್ಯಂತ ಕಾಡುಗಳ ಉಳಿವಿಗೆ ಅಪಾಯವನ್ನುಂಟುಮಾಡುತ್ತದೆ. ಅವುಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು, ಮಾರ್ಚ್ 21 ಅನ್ನು ಅಂತರರಾಷ್ಟ್ರೀಯ ಅರಣ್ಯ ದಿನವೆಂದು ಆಚರಿಸಲಾಗುತ್ತದೆ, ಇದು ಅವುಗಳ ಮಹತ್ವದ ಬಗ್ಗೆ ಚಿಂತಿಸಲು ಮತ್ತು ಅವುಗಳ ಸಂರಕ್ಷಣೆ ಮತ್ತು ಆರೈಕೆಗೆ ನಮ್ಮನ್ನು ಬದ್ಧರಾಗಲು ನಮ್ಮನ್ನು ಆಹ್ವಾನಿಸುತ್ತದೆ.

ಈ ಗುರಿಯೊಂದಿಗೆ ಸಂಪೂರ್ಣವಾಗಿ ಹೊಂದಿಕೊಂಡಂತೆ, ಐಬರ್ಡ್ರೋಲಾ ಗ್ರೂಪ್‌ನಲ್ಲಿರುವ ನಾವು ಪರಿಸರ ವ್ಯವಸ್ಥೆಗಳ ಜೈವಿಕ ವೈವಿಧ್ಯತೆಯ ಸಂರಕ್ಷಣೆ ಮತ್ತು ಪ್ರಚಾರವನ್ನು ನಮ್ಮ ಕಾರ್ಯತಂತ್ರದಲ್ಲಿ ಸಂಯೋಜಿಸಿದ್ದೇವೆ, ಇದು ಜೀವವೈವಿಧ್ಯ ನೀತಿಯಲ್ಲಿ ಸಾಕಾರಗೊಂಡಿರುವ ಬದ್ಧತೆಯಾಗಿದೆ ಮತ್ತು ಇದಕ್ಕಾಗಿ ನಾವು ಮಹತ್ವಾಕಾಂಕ್ಷೆಯ ಗುರಿಯನ್ನು ಹೊಂದಿದ್ದೇವೆ: 2030 ರ ವೇಳೆಗೆ ಜೀವವೈವಿಧ್ಯದ ಶೂನ್ಯ ನಿವ್ವಳ ನಷ್ಟವನ್ನು ಸಾಧಿಸುವುದು. ಈ ವಿಶ್ವ ದಿನಕ್ಕೆ ಅನುಗುಣವಾಗಿ, ವಿವಿಧ ಉಪಕ್ರಮಗಳೊಂದಿಗೆ ಅರಣ್ಯಗಳ ಸಂರಕ್ಷಣೆ ಮತ್ತು ಪುನಃಸ್ಥಾಪನೆಯನ್ನು ಖಚಿತಪಡಿಸಿಕೊಳ್ಳಲು ನಮ್ಮ ಬದ್ಧತೆಯನ್ನು ನಾವು ಪುನರುಚ್ಚರಿಸುತ್ತೇವೆ. ಆದರೆ ಈ ಪರಿಸರ ವ್ಯವಸ್ಥೆಗಳ ಮಹತ್ವವನ್ನು ನಾವು ಪ್ರತಿ ವರ್ಷ ಏಕೆ ನೆನಪಿಟ್ಟುಕೊಳ್ಳಬೇಕು?

**2026 ರ ಅಂತರರಾಷ್ಟ್ರೀಯ ಅರಣ್ಯ ದಿನದ ಥೀಮ್**

ಈ ವರ್ಷ, ಅಂತರರಾಷ್ಟ್ರೀಯ ಅರಣ್ಯ ದಿನ 2026 ಅನ್ನು ಅರಣ್ಯಗಳು ಮತ್ತು ಆರ್ಥಿಕತೆಗಳು ಎಂಬ ಥೀಮ್ ಅಡಿಯಲ್ಲಿ ರೂಪಿಸಲಾಗಿದೆ , ಇದು ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆರ್ಥಿಕ ಸಮೃದ್ಧಿಯನ್ನು ಹೆಚ್ಚಿಸುವಲ್ಲಿ ಕಾಡುಗಳು ವಹಿಸುವ ಅಗತ್ಯ ಪಾತ್ರವನ್ನು ಗುರುತಿಸುತ್ತದೆ. ಈ ಪಾತ್ರವು ಮರದ ಉತ್ಪಾದನೆ ಮತ್ತು ಕಚ್ಚಾ ವಸ್ತುಗಳ ವ್ಯಾಪಾರವನ್ನು ಮೀರಿ ವಿಸ್ತರಿಸುತ್ತದೆ, ಏಕೆಂದರೆ ಕಾಡುಗಳು ಕುಟುಂಬ ಕೃಷಿಯನ್ನು ಬೆಂಬಲಿಸುತ್ತವೆ, ಕೃಷಿ ಉತ್ಪಾದಕತೆಯನ್ನು ಸುಧಾರಿಸುತ್ತವೆ ಮತ್ತು ಜಲಾನಯನ ಪ್ರದೇಶಗಳನ್ನು ರಕ್ಷಿಸುತ್ತವೆ, ಶುದ್ಧ ನೀರು ಮತ್ತು ಆರೋಗ್ಯಕರ ಪರಿಸರ ವ್ಯವಸ್ಥೆಗಳನ್ನು ಖಚಿತಪಡಿಸುತ್ತವೆ. ಅರಣ್ಯನಾಶ, ಆವಾಸಸ್ಥಾನ ಅವನತಿ ಮತ್ತು ಹವಾಮಾನ ಬದಲಾವಣೆಯ ಹೆಚ್ಚುತ್ತಿರುವ ಬೆದರಿಕೆಯನ್ನು ಪರಿಹರಿಸಲು ನಮ್ಮ ಕಾಡುಗಳಿಗೆ ತಾಂತ್ರಿಕ ಆವಿಷ್ಕಾರಗಳನ್ನು ಬಳಸಿಕೊಳ್ಳಲು ಈ ದಿನವು ಕ್ರಮಕ್ಕೆ ಕರೆಯಾಗಿ ಕಾರ್ಯನಿರ್ವಹಿಸುತ್ತದೆ.

**ಈ ವರ್ಷದ ಅಭಿಯಾನದ ಪ್ರಮುಖ ಸಂದೇಶಗಳಲ್ಲಿ ಹಲವಾರು ಗಮನಾರ್ಹ ಅಂಶಗಳಿವೆ:** ಪ್ರಕೃತಿ, ವಿಶೇಷವಾಗಿ ಕಾಡುಗಳು, ಸುಮಾರು 44 ಟ್ರಿಲಿಯನ್ ಉತ್ಪಾದಿಸುತ್ತವೆ, ಇದು ಜಾಗತಿಕ ಜಿಡಿಪಿಯ ಅರ್ಧಕ್ಕಿಂತ ಹೆಚ್ಚು, ಮತ್ತು ಹವಾಮಾನ ಸಂಬಂಧಿತ ವಿಪತ್ತುಗಳಿಂದ ಆರ್ಥಿಕತೆಗಳನ್ನು ರಕ್ಷಿಸಲು ಸಹಾಯ ಮಾಡುತ್ತದೆ. ಉದಯೋನ್ಮುಖ ಜೈವಿಕ ಆರ್ಥಿಕತೆಯು ಕಾಡುಗಳನ್ನು ಅದರ ಕೇಂದ್ರದಲ್ಲಿ ಇರಿಸುತ್ತದೆ, ಏಕೆಂದರೆ ಮರ ಮತ್ತು ಬಿದಿರಿನಂತಹ ಉತ್ಪನ್ನಗಳು ಉಕ್ಕು ಮತ್ತು ಪ್ಲಾಸ್ಟಿಕ್‌ನಂತಹ ಹೆಚ್ಚಿನ ಇಂಗಾಲದ ಹೆಜ್ಜೆಗುರುತನ್ನು ಹೊಂದಿರುವ ವಸ್ತುಗಳನ್ನು ಬದಲಾಯಿಸಬಹುದು, ಇದು ಹೆಚ್ಚು ಸುಸ್ಥಿರ ಆರ್ಥಿಕತೆಯನ್ನು ಉತ್ತೇಜಿಸುತ್ತದೆ. ಇದಲ್ಲದೆ, ಅರಣ್ಯಗಳು ಅನೇಕ ಗ್ರಾಮೀಣ ಸಮುದಾಯಗಳ ಆರ್ಥಿಕತೆಗಳಿಗೆ ಪ್ರಮುಖವಾಗಿವೆ, ಆಹಾರ, ಔಷಧಗಳು, ಇಂಧನ, ಆದಾಯ ಮತ್ತು ಶುದ್ಧ ನೀರು ಮತ್ತು ಮಣ್ಣಿನ ಸ್ಥಿರತೆಯಂತಹ ಪ್ರಯೋಜನಗಳನ್ನು ಒದಗಿಸುತ್ತವೆ.

**ಅಂತರರಾಷ್ಟ್ರೀಯ ಅರಣ್ಯ ದಿನ 2026: ಅರಣ್ಯಗಳು ಮತ್ತು ಆರ್ಥಿಕತೆಗಳು.**

**ಅಂತರರಾಷ್ಟ್ರೀಯ ಅರಣ್ಯ ದಿನವನ್ನು ಏಕೆ ಆಚರಿಸಲಾಗುತ್ತದೆ?**

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ ಅಂದಾಜಿನ ಪ್ರಕಾರ, ಕಾಡುಗಳು ಭೂಮಿಯ ಮೂರನೇ ಒಂದು ಭಾಗವನ್ನು ಆವರಿಸಿವೆ ಮತ್ತು ಗ್ರಹ ಮತ್ತು ಜೀವದ ಸಂರಕ್ಷಣೆಗಾಗಿ ಪ್ರಕೃತಿಯ ಅಗತ್ಯ ಕಾರ್ಯಗಳನ್ನು ನಿರ್ವಹಿಸುವ ಶ್ರೇಷ್ಠ ಪೂರೈಕೆದಾರರಲ್ಲಿ ಒಂದಾಗಿದೆ:

**★ ಅವು ಹವಾಮಾನ ಬದಲಾವಣೆಯನ್ನು ತಡೆಯುತ್ತವೆ**

ಮರಗಳು ಇಂಗಾಲವನ್ನು ಸಂಗ್ರಹಿಸುತ್ತವೆ, ಇದು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ತಗ್ಗಿಸಲು ಸಹಾಯ ಮಾಡುತ್ತದೆ. ವಿಶ್ವದ ಕಾಡುಗಳು 662 ಶತಕೋಟಿ ಟನ್ ಇಂಗಾಲವನ್ನು ಹೊಂದಿವೆ ಎಂದು ಅಂದಾಜಿಸಲಾಗಿದೆ, ಇದು ಮಣ್ಣು ಮತ್ತು ಸಸ್ಯವರ್ಗದಲ್ಲಿ ಕಂಡುಬರುವ ವಿಶ್ವದ ಇಂಗಾಲದ ದಾಸ್ತಾನುಗಳಲ್ಲಿ ಅರ್ಧಕ್ಕಿಂತ ಹೆಚ್ಚು. ಅವು ನೈಸರ್ಗಿಕ ಹವಾನಿಯಂತ್ರಣವೂ ಆಗಿದ್ದು, ಗಾಳಿಯ ಉಷ್ಣತೆಯನ್ನು 2 ರಿಂದ 8 ಡಿಗ್ರಿಗಳಷ್ಟು ಕಡಿಮೆ ಮಾಡುತ್ತದೆ.

**★ ಅವು ಶಬ್ದ ತಡೆಗೋಡೆಯನ್ನು ರೂಪಿಸುತ್ತವೆ.**


ದೊಡ್ಡ ಅರಣ್ಯಗಳು ರಸ್ತೆಗಳು, ಕೈಗಾರಿಕೆಗಳು ಅಥವಾ ನಗರ ಕೇಂದ್ರಗಳಿಂದ ಬರುವ ಶಬ್ದ ತರಂಗಗಳನ್ನು ತಗ್ಗಿಸುತ್ತವೆ.

**★ ಅವು ನೀರಿನ ಮೂಲ.**

ವಿಶ್ವದ ಪ್ರಮುಖ ನಗರಗಳಿಗೆ ಅಗತ್ಯವಿರುವ ಶುದ್ಧ ನೀರಿನ 85% ರಷ್ಟು ನೀರನ್ನು ಅರಣ್ಯಗಳು ಒದಗಿಸುತ್ತವೆ.

**★ ಅವು ಶಕ್ತಿಯನ್ನು ಒದಗಿಸುತ್ತವೆ**

ಮರದ ಇಂಧನಗಳು ಸಂಭಾವ್ಯವಾಗಿ ನವೀಕರಿಸಬಹುದಾದ ಮತ್ತು ಇಂಗಾಲ-ತಟಸ್ಥ ಇಂಧನ ಮೂಲವನ್ನು ಪ್ರತಿನಿಧಿಸುತ್ತವೆ. ಎಫ್‌ಎಒ ಅಂದಾಜಿನ ಪ್ರಕಾರ ಸುಮಾರು 2.6 ಶತಕೋಟಿ ಜನರು ಮನೆಯ ಅಡುಗೆಗಾಗಿ ಮರ ಮತ್ತು ಇತರ ಸಾಂಪ್ರದಾಯಿಕ ಇಂಧನಗಳನ್ನು ಅವಲಂಬಿಸಿದ್ದಾರೆ.



**★ ಅವು ಅನೇಕ ಜಾತಿಗಳಿಗೆ ನೆಲೆಯಾಗಿವೆ.**

ಅವು ಭೂಮಿಯ ಮೇಲಿನ ಜೀವವನ್ನು ಸಂರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಮತ್ತು ಅತ್ಯಂತ ಜೀವವೈವಿಧ್ಯದ ಭೂಮಿಯ ಪರಿಸರ ವ್ಯವಸ್ಥೆಗಳಾಗಿದ್ದು, ವಿಶ್ವದ 80% ಸಸ್ಯ ಮತ್ತು ಪ್ರಾಣಿ ಪ್ರಭೇದಗಳಿಗೆ ಆತಿಥ್ಯ ವಹಿಸುತ್ತವೆ.

**★ ಅವು ನಮ್ಮ ಉಳಿವನ್ನು ಕಾಪಾಡುತ್ತವೆ**

5 ಶತಕೋಟಿಗೂ ಹೆಚ್ಚು ಜನರು ತಮ್ಮ ಸ್ವಂತ ಬಳಕೆಗಾಗಿ ಅಥವಾ ತಮ್ಮ ಜೀವನೋಪಾಯವನ್ನು ಬೆಂಬಲಿಸಲು ಮರಮಟ್ಟುಗಳಲ್ಲದ ಅರಣ್ಯ ಉತ್ಪನ್ನಗಳನ್ನು ಬಳಸುತ್ತಾರೆ. ಇದರ ಜೊತೆಗೆ, ಕಾಡುಗಳು ಮಾನಸಿಕ ಆರೋಗ್ಯವನ್ನು ಸುಧಾರಿಸಲು ಮತ್ತು ರೋಗಗಳನ್ನು ತಡೆಗಟ್ಟಲು ಶಕ್ತಗೊಳಿಸುತ್ತವೆ ಮತ್ತು ಕೊಡುಗೆ ನೀಡುತ್ತವೆ.

**★ ಅವು ಪರಿಸರ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸುತ್ತವೆ**


ಅರಣ್ಯಗಳನ್ನು ಸುಸ್ಥಿರವಾಗಿ ನಿರ್ವಹಿಸಿದರೆ, ಮಣ್ಣಿನ ಸವೆತ ಮತ್ತು ಹಿಮಪಾತ, ಭೂಕುಸಿತ ಮತ್ತು ನೈಸರ್ಗಿಕ ವಿಕೋಪಗಳ ಅಪಾಯವನ್ನು ಕಡಿಮೆ ಮಾಡಲು ಕೊಡುಗೆ ನೀಡುತ್ತದೆ.

ಕಾಡುಗಳ ಅಗಾಧವಾದ ಪರಿಸರ, ಆರ್ಥಿಕ ಮತ್ತು ಸಾಮಾಜಿಕ ಪ್ರಯೋಜನಗಳನ್ನು ತಜ್ಞರು ಒಪ್ಪುತ್ತಾರೆ, ಆದರೆ ಅರಣ್ಯನಾಶ ಮತ್ತು ಅವನತಿ ಅವುಗಳ ಸಂರಕ್ಷಣೆಗೆ ಅಪಾಯವನ್ನುಂಟುಮಾಡುತ್ತದೆ.

**ಅರಣ್ಯನಾಶ ಮತ್ತು ಅರಣ್ಯನಾಶದ ಬಗ್ಗೆ ಜಾಗೃತಿ ಮೂಡಿಸುವುದು**

ಎಫ್‌ಎಒ ಅರಣ್ಯನಾಶವನ್ನು ಕೃಷಿ, ಹುಲ್ಲುಗಾವಲುಗಳು, ಜಲಾಶಯಗಳು ಮತ್ತು ನಗರ ಪ್ರದೇಶಗಳಂತಹ ಇತರ ಭೂ ಬಳಕೆಗಳಿಗೆ ಅರಣ್ಯಗಳ ಪರಿವರ್ತನೆ ಎಂದು ವ್ಯಾಖ್ಯಾನಿಸುತ್ತದೆ ಮತ್ತು ಈ ಪರಿಸರ ವ್ಯವಸ್ಥೆಗಳ ಭವಿಷ್ಯಕ್ಕೆ ಇದು ಪ್ರಮುಖ ಅಪಾಯವಾಗಿದೆ. ಅರಣ್ಯನಾಶವು ವರ್ಷಕ್ಕೆ 13 ಮಿಲಿಯನ್ ಹೆಕ್ಟೇರ್‌ಗಳಷ್ಟು ದರದಲ್ಲಿ ಮುಂದುವರಿಯುತ್ತಿದೆ ಮತ್ತು ಜಾಗತಿಕ ತಾಪಮಾನ ಏರಿಕೆಗೆ ಕಾರಣವಾಗುವ ಹಸಿರುಮನೆ ಅನಿಲ ಹೊರಸೂಸುವಿಕೆಯಲ್ಲಿ 12-20% ಗೆ ಕಾರಣವಾಗಿದೆ ಎಂದು ಎಫ್‌ಎಒ ತಿಳಿಸಿದೆ. ಈ ಸಂಸ್ಥೆಯು 1990 ರಿಂದ, ಈ ಬೆದರಿಕೆಯಿಂದಾಗಿ ವಿಶ್ವಾದ್ಯಂತ 420 ಮಿಲಿಯನ್ ಹೆಕ್ಟೇರ್ ಅರಣ್ಯವನ್ನು ಕಳೆದುಕೊಂಡಿದೆ ಎಂದು ಅಂದಾಜಿಸಿದೆ, ಇದು ಕಡಿಮೆಯಾಗುತ್ತಿದ್ದರೂ, ಗ್ರಹದ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಸಾಕಷ್ಟು ದರದಲ್ಲಿ ಕಡಿಮೆಯಾಗುತ್ತಿಲ್ಲ.

ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್ ಪ್ರಕಾರ ಈ ಪರಿಸರ ವ್ಯವಸ್ಥೆಗಳಿಗೆ ಇರುವ ಇನ್ನೊಂದು ಪ್ರಮುಖ ಬೆದರಿಕೆ ಎಂದರೆ ಅವನತಿ, ಇದು ಮಾನವ ಚಟುವಟಿಕೆಗಳಿಂದ (ಉದಾ, ಅಕ್ರಮ ಮರ ಕಡಿಯುವಿಕೆ, ಹವಾಮಾನ ಬದಲಾವಣೆ) ಅಥವಾ ನೈಸರ್ಗಿಕ (ಉದಾ, ಬೆಂಕಿ, ಕೀಟಗಳು) ಹಾನಿಗೊಳಗಾದ ನಂತರ ಸರಕು ಮತ್ತು ಸೇವೆಗಳನ್ನು ಒದಗಿಸುವ ಕಾಡುಗಳ ಸಾಮರ್ಥ್ಯದಲ್ಲಿನ ಕಡಿತವಾಗಿದೆ.



ಅಂತರರಾಷ್ಟ್ರೀಯ ಪ್ರಯತ್ನಗಳು ಅರಣ್ಯಗಳ ರಕ್ಷಣೆ ಮತ್ತು ಪುನಃಸ್ಥಾಪನೆಯ ಕಡೆಗೆ ಗಮನ ಹರಿಸಲಾಗಿದ್ದು, ಈ ಬೆದರಿಕೆಗಳನ್ನು ಕೊನೆಗೊಳಿಸುವ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಎಸ್) ಪೂರೈಸಲು ಅವುಗಳ ಪುನಃಸ್ಥಾಪನೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿವೆ. 2030 ರ ಕಾರ್ಯಸೂಚಿಯೊಳಗೆ, ಎಸ್‌ಡಿಜಿ 15, ಪಾಯಿಂಟ್ 15.2 ಎಲ್ಲಾ ರೀತಿಯ ಅರಣ್ಯಗಳ ಸುಸ್ಥಿರ ನಿರ್ವಹಣೆಯ ಅನುಷ್ಠಾನವನ್ನು ಉತ್ತೇಜಿಸುವ, ಅರಣ್ಯನಾಶವನ್ನು ನಿಲ್ಲಿಸುವ, ಅವನತಿ ಹೊಂದಿದ ಕಾಡುಗಳನ್ನು ಪುನಃಸ್ಥಾಪಿಸುವ ಮತ್ತು ಜಾಗತಿಕವಾಗಿ ಅರಣ್ಯೀಕರಣ ಮತ್ತು ಮರು ಅರಣ್ಯೀಕರಣವನ್ನು ಗಮನಾರ್ಹವಾಗಿ ಹೆಚ್ಚಿಸುವ ಅಗತ್ಯದ ಬಗ್ಗೆ ಮಾತನಾಡುತ್ತದೆ.

ನಾವು ಬದ್ಧರಾಗುತ್ತೇವೆ, ಮತ್ತೆ ಅರಣ್ಯ ಬೆಳೆಸುತ್ತೇವೆ, ಕಾಳಜಿ ವಹಿಸುತ್ತೇವೆ

ಐಬರ್ಡ್ರೋಲಾದಲ್ಲಿ, ನಾವು ವಿವಿಧ ಕಾರ್ಯಕ್ರಮಗಳ ಮೂಲಕ ಅರಣ್ಯ ಜೀವವೈವಿಧ್ಯತೆಯ ಸಂರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸಸ್ಯ, ಪ್ರಾಣಿ ಮತ್ತು ನೈಸರ್ಗಿಕ ಪರಂಪರೆಯನ್ನು ಸಂರಕ್ಷಿಸಲು ಕೆಲಸ ಮಾಡುತ್ತೇವೆ:

**ನಮ್ಮ ಅರಣ್ಯೀಕರಣ ಗುರಿ: 2030 ರ ವೇಳೆಗೆ 20 ಮಿಲಿಯನ್ ಮರಗಳು.**

ನಮ್ಮಲ್ಲಿ ಅರ್ಬೋರ್ಲ್ ಪ್ರೋಗ್ರಾಂ (ದಿ ಟ್ರೀಸ್ ಪ್ರೋಗ್ರಾಂ) ಎಂಬ ಅರಣ್ಯೀಕರಣ ಯೋಜನೆ ಇದೆ, ಇದು 2030 ರ ವೇಳೆಗೆ 20 ಮಿಲಿಯನ್ ಮರಗಳನ್ನು ನೆಡುವುದನ್ನು ಉತ್ತೇಜಿಸುತ್ತದೆ - 2025 ರ ವೇಳೆಗೆ 8 ಮಿಲಿಯನ್ ಮರಗಳನ್ನು ನೆಡುವ ಮೊದಲ ಗುರಿಯೊಂದಿಗೆ. ಈ ನೆಟ್ಟ ಉಪಕ್ರಮವು 30 ವರ್ಷಗಳಲ್ಲಿ ಸುಮಾರು 6 ಮಿಲಿಯನ್ ಟನ್ 2 ಅನ್ನು ಸೆರೆಹಿಡಿಯುತ್ತದೆ. ಇಂಗಾಲದ ಡೈಆಕ್ಸೈಡ್‌ನ ಈ ಹೀರಿಕೊಳ್ಳುವಿಕೆಯು ಭೂಮಿಯನ್ನು 116 ಬಾರಿ ಸುತ್ತುವ ಕಾರಿನ ಹೊರಸೂಸುವಿಕೆಯನ್ನು ತಟಸ್ಥಗೊಳಿಸುತ್ತದೆ. ಕಳೆದ ಕೆಲವು ವರ್ಷಗಳಲ್ಲಿ, ಐಬರ್ಡ್ರೋಲಾ ಗ್ರೂಪ್ ಏಳು ದೇಶಗಳಲ್ಲಿ 2 ಮಿಲಿಯನ್‌ಗಿಂತಲೂ ಹೆಚ್ಚು ಮರಗಳನ್ನು ನೆಟ್ಟಿದೆ.

> ವಿಶ್ವ ಅರಣ್ಯ ದಿನ
> **ಅರಣ್ಯಗಳು ಮತ್ತು ಆಹಾರಗಳು**
> **ಕಾಡನ್ನು ರಕ್ಷಿಸಿ, ನಾಡನ್ನು ಉಳಿಸೋಣ**
> ಆಹಾರ-ಇಂಧನ-ಉದ್ಯೋಗ-ಮಣ್ಣಿನ ಫಲವತ್ತತೆಯ ಸಂರಕ್ಷಣೆ-ಜಲ ಸಂಪನ್ಮೂಲಗಳ ರಕ್ಷಣೆ-ಜೀವವೈವಿಧ್ಯತೆಯ ಆವಾಸ ಸ್ಥಾನ-ಅರಣ್ಯ-ಅವಲಂಬಿ ಸಮುದಾಯಗಳಿಗೆ ಆಧಾರ-ಸ್ಥಳೀಯ ಜನರ ಉಳಿವಿಗೆ ಮೂಲಾಧಾರ-ಇಂಗಾಲ ಹೀರುವಿಕೆ - ಹವಾಮಾನ ಬದಲಾವಣೆ ತಗ್ಗಿಸುವಿಕೆ

**ಈ ಉಪಕ್ರಮವನ್ನು ಮೂರು ಶಾಖೆಗಳಲ್ಲಿ ನಿರೂಪಿಸಲಾಗಿದೆ:**

**★ ನೈಸರ್ಗಿಕ ಪರಂಪರೆಯ ಸಂರಕ್ಷಣೆ,**

ಹೊಸ ಮೂಲಸೌಕರ್ಯಗಳ ಆಕ್ರಮಣದಿಂದ ಪ್ರಭಾವಿತವಾದ ಅರಣ್ಯ ಆವಾಸಸ್ಥಾನಗಳನ್ನು ತಗ್ಗಿಸಲು ಮತ್ತು ಸರಿದೂಗಿಸಲು. 2020 ಮತ್ತು 2021 ರಲ್ಲಿ, ನಾವು ಬ್ರೆಜಿಲ್, ಸ್ಪೇನ್, ಪೋರ್ಚುಗಲ್, ಯುಕೆ, ಯುಎಸ್, ಮೆಕ್ಸಿಕೊ ಮತ್ತು ಗ್ರೀಸ್‌ನಲ್ಲಿ ಎರಡು ಮಿಲಿಯನ್ ಮರಗಳನ್ನು ನೆಟ್ಟಿದ್ದೇವೆ.

**★ ನೈಸರ್ಗಿಕ ಮೌಲ್ಯದ ಪುನರುತ್ಪಾದನೆ ಮತ್ತು ಸೃಷ್ಟಿ,**

ನಮ್ಮ ಸ್ವಂತ ಭೂಮಿಯಲ್ಲಿ ಅಥವಾ ಮೂರನೇ ವ್ಯಕ್ತಿಗಳ ಭೂಮಿಯಲ್ಲಿ ಗಿಡಗಳನ್ನು ನೆಡಲು ಅನುವು ಮಾಡಿಕೊಡುವ ಉಪಕ್ರಮಗಳನ್ನು ಉತ್ತೇಜಿಸುವ ಮೂಲಕ ಅರಣ್ಯ ದ್ರವ್ಯರಾಶಿಯ ನಷ್ಟವನ್ನು ಹಿಮ್ಮೆಟ್ಟಿಸುತ್ತದೆ. 2022 ರಲ್ಲಿ ನಾವು ಸ್ಟಾರ್ಟ್-ಅಪ್ ಓಲೆ ಸಹಯೋಗದೊಂದಿಗೆ ಮತ್ತು ಯುರೋಪಿಯನ್ ಆಯೋಗದ ಬೆಂಬಲದೊಂದಿಗೆ ಗ್ರಾಮೀಣ ಪ್ರದೇಶಗಳಲ್ಲಿ ನಾವೀನ್ಯತೆ ಮತ್ತು ಸುಸ್ಥಿರತೆ ಎಂಬ ಸವಾಲನ್ನು ಪ್ರಾರಂಭಿಸಿದ್ದೇವೆ. ಸುಟ್ಟ ಭೂಮಿ ಅಥವಾ ಪಾಳುಭೂಮಿಯನ್ನು ಕಾಡುಗಳಾಗಿ ಪರಿವರ್ತಿಸುವ ಮೂಲಕ ಸ್ಪೇನ್ ಮತ್ತು ಪೋರ್ಚುಗಲ್‌ನ ಜನನಿಬಿಡ ಪ್ರದೇಶಗಳಲ್ಲಿ ನೈಸರ್ಗಿಕ ಸ್ಥಳಗಳ ಚೇತರಿಕೆಯನ್ನು ಉತ್ತೇಜಿಸುವ ಪ್ರವರ್ತಕ ಕಾರ್ಯಕ್ರಮ.

**★ ಸಂಶೋಧನೆ ಮತ್ತು ಜಾಗೃತಿ ಮೂಡಿಸುವುದು,**

ಕಂಪನಿಯ ಸ್ವಯಂಸೇವಕ ಕಾರ್ಯಕ್ರಮ ಮತ್ತು ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಬೆಂಬಲ ನೀಡುವ ಮೂಲಕ ಹಂಚಿಕೆಯ ಜ್ಞಾನ ಮತ್ತು ಸಾಮಾಜಿಕ ಮೌಲ್ಯವನ್ನು ಉತ್ತೇಜಿಸಲು. ಸ್ವಯಂಸೇವಕ ಕ್ರಿಯೆಗಳ ಮೂಲಕ, ಐಬರ್ಡ್ರೋಲಾ ಈಗಾಗಲೇ 13,000 ಕ್ಕೂ ಹೆಚ್ಚು ಮರಗಳನ್ನು ನೆಡುವುದನ್ನು ಉತ್ತೇಜಿಸಿದೆ.

ಒಂದು ದೇಶದ ಪ್ರಾಕೃತಿಕ ಸಮತೋಲನಕ್ಕೆ ಆ ದೇಶದ ಒಟ್ಟು ಭೂ ಪ್ರದೇಶದಲ್ಲಿ ಶೇ 33 ಅರಣ್ಯ ಪ್ರದೇಶ ಇರಬೇಕು. ನಮ್ಮ ದೇಶ ಹಾಗೂ ರಾಜ್ಯದಲ್ಲಿ ಸದ್ಯ ಈ ಪ್ರಮಾಣ ಶೇ 20 ರ ಆಸುಪಾಸಿನಲ್ಲಿದೆ. ಹಾಗಾಗಿ ಈ ಬಾರಿ ಇಂದು ವಿಶ್ವ ಅರಣ್ಯ ದಿನ ಈ ಬಾರಿ ಅರಣ್ಯಗಳು ಮತ್ತು ಸುಸ್ಥಿರ ಉತ್ಪಾದನೆ ಮತ್ತು ಬಳಕೆ ಎನ್ನುವ ಥೀಮ್‌ನಲ್ಲಿ ಆಚರಿಸಲಾಗುತ್ತಿದೆ.

ವಿಶ್ವಸಂಸ್ಥೆ ಸಾಮಾನ್ಯ ಅಧಿವೇಶನದಲ್ಲಿ ವಿಸ್ತೃತ ಚರ್ಚೆ ನಡೆದು ಸದ್ಯದ ಜತೆಗೆ ಮುಂದಿನ ಪೀಳಿಗೆಗೂ ಅರಣ್ಯ ಸಂರಕ್ಷಿಸಲು ಅಂತಾರಾಷ್ಟ್ರೀಯ ಅರಣ್ಯ ದಿನ ಆಚರಣೆ ನಿರ್ಧಾರಕ್ಕೆ ಬರಲಾಯಿತು. ಹಾಗು 1971ರ ನವೆಂಬರ್‌ನಲ್ಲಿ ಆಹಾರ ಮತ್ತು ಕೃಷಿ ಸಂಘಟನೆಯ 16ನೇ ಸಮ್ಮೇಳನದಲ್ಲಿ ವಿಶ್ವ ಅರಣ್ಯ ದಿನ ಆಚರಿಸುವ ನಿರ್ಣಯ ಅಂಗೀಕರಿಸಲಾಯಿತು. ಮತ್ತು 2012ರಲ್ಲಿ ಅಂತಾರಾಷ್ಟ್ರೀಯ ಅರಣ್ಯ ಸಂಶೋಧನಾ ಕೇಂದ್ರ, ಆರು ದಿನಗಳ ಅರಣ್ಯ ದಿನಗಳ ಕಾರ್ಯಕ್ರಮ ರೂಪಿಸಿ ಇದಕ್ಕೆ ಹೆಚ್ಚಿನ ಮಹತ್ವ ನೀಡಿ ಮಾರ್ಚ್ 21ರಂದು ವಿಶ್ವ ಅರಣ್ಯ ದಿನ ಆಚರಿಸುವಂತೆ ಮಾಡಿತು.

ಒಂದೆಡೆ ಅರಣ್ಯದ ಪ್ರಮಾಣ ತಗ್ಗುತ್ತಿದ್ದರೆ ಭಾರತದಲ್ಲಿಯೇ ಮರದ ಕೊರತೆ ಎದುರಾಗಿ ಪ್ರತಿ ವರ್ಷ 39 ಸಾವಿರ ಕೋಟಿ ಮೌಲ್ಯದ ಮರ ಆಮದು ಮಾಡಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರಕೃತಿ ಮನುಷ್ಯನ ಆಸೆಗಳನ್ನು ಪೂರೈಸುತ್ತದೆ. ದುರಾಸೆಯನ್ನಲ್ಲ. ಮನುಷ್ಯ ಅರಣ್ಯವನ್ನು ಉಳಿಸದಿದ್ದರೆ ಮನುಷ್ಯ ಅಳಿವಿನಂಚಿಗೆ ಹೋಗುತ್ತಾನೆ.

---

# ಮಾನಸಿಕ ರೋಗಗಳ ಅರಿವು

> **ಕೆಲವು ಮಾನಸಿಕ ರೋಗಗಳಿಂದ ಬಹಳ ಜನರು ಬಳಲುತ್ತಿದ್ದರೂ ಅದನ್ನು ಹೆಚ್ಚಾಗಿ ಮುಚ್ಚಿಡಲಾಗುತ್ತದೆ...**
> ಏಕೆಂದರೆ ಅವು ತೀವ್ರ ವರ್ತನಾ ವೈಪರೀತ್ಯದಿಂದ ಕೂಡಿರುವುದಿಲ್ಲ, ಸೂಕ್ಷ್ಮ ಕ್ರಮವಾಗಿ ಗಮನಿಸದ ಹೊರತು ತಿಳಿಯುವುದಿಲ್ಲ, ಉದಾಹರಣೆಗೆ ಮನೋಬೇನೆಗಳಾದ ಹಿಸ್ಟೀರಿಯಾ, ಗೀಳುಚಟ, ಫೋಬಿಯಾ ಇತ್ಯಾದಿಗಳು. ಇವುಗಳಲ್ಲದೆ, ಮನೋದೈಹಿಕ ರೋಗಗಳು ಅಂದರೆ ಮಾನಸಿಕ ಕಾರಣಗಳಿಂದ ದೈಹಿಕ ರೋಗಗಳು, ಅಂದರೆ ಮಾನಸಿಕ ಕಾರಣಗಳಿಂದ ದೈಹಿಕ ರೋಗಗಳು ಕಾಣಿಸಿಕೊಳ್ಳುತ್ತವೆ. ಅಲ್ಸರ್, ಅಸ್ತಮಾ, ಕಜ್ಜಿ, ಅಲರ್ಜಿಗಳು, ಮೈಗ್ರೇನ್ ತಲೆನೋವು, ಬ್ಲಡ್ ಪ್ರಷರ್ ಇತ್ಯಾದಿಗಳು ಕೆಲವು ಉದಾಹರಣೆಗಳಾಗಿವೆ.

ನಿಮಗೆ ಅಥವಾ ನಿಮಗೆ ಪರಿಚಯವಿರುವ, ಮಾನಸಿಕ ಅದು ತಿಳಿದುಬಂದರೆ ನಿಮಗೆ ಹೇಗೆ ಅನಿಸಬಹುದು? ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ಕೋಟಿಗಟ್ಟಲೆ ಜನರಿಗೆ ಮಾನಸಿಕ ತೊಂದರೆಗಳಿವೆ. ಇದು ಅವರ ಬಂಧು ಮಿತ್ರರ ಬದುಕನ್ನೂ ಬಾಧಿಸುತ್ತದೆ. ಗಂಡು, ಹೆಣ್ಣು, ವಯಸ್ಸು, ಸಂಸ್ಕೃತಿ, ಜಾತಿ, ಧರ್ಮ, ಬಡವ, ಶ್ರೀಮಂತ ಎನ್ನುವ ಯಾವುದೇ ಬೇಧವಿಲ್ಲದೆ ಮಾನಸಿಕ ರೋಗಗಳು ಬಾಧಿಸಬಲ್ಲವು. ಜೀವನದ ಒಂದಲ್ಲಾ ಅದು ಹಂತದಲ್ಲಿ ಪ್ರತಿ ನಾಲ್ಕು ಜನರಲ್ಲಿ ಒಬ್ಬನು ಯಾವುದಾದರೊಂದು ಮಾನಸಿಕ ತೊಂದರೆಗೆ ಒಳಗಾಗುತ್ತಾನೆ ಎಂಬುದು ಅಧ್ಯಯನವೊಂದರ ವರದಿಯಾಗಿದೆ. ಹೆಚ್ಚಿನವರನ್ನು ಬಾಧಿಸುವ ಖಾಯಿಲೆಗಳೆಂದರೆ ಮನೋವಿಕೃತಿಗಳಾದ ಉನ್ಮಾದ ವಿಷಣ್ಣತಾರೋಗ (ಮ್ಯಾನಿಕ್ ಡಿಪ್ರೆಸಿವ್ ಸೈಕೋಸಿಸ್) ಹಾಗು ಸ್ಕಿಜೋಫ್ರೇನಿಯಾಗಳು, ಎಷ್ಟು ಗಂಭೀರವಾದ ಮಾನಸಿಕ ಖಾಯಿಲೆಗಳೆಂದರೆ ದೈನಂದಿನ ಕೆಲಸಗಳನ್ನು ಮಾಡಿಕೊಳ್ಳಲೂ ಕಷ್ಟವಾಗುತ್ತದೆ. ಈ ಮನೋರೋಗಗಳನ್ನು ಬಹಳ ಬೇಗ ಇತರರು ಗುರುತಿಸಬಹುದು, ಅಷ್ಟರ ಮಟ್ಟಿಗೆ ವರ್ತನಾ ವೈಪರೀತ್ಯವಿರುತ್ತದೆ.

ಕೆಲವು ಮಾನಸಿಕ ರೋಗಗಳಿಂದ ಬಹಳ ಜನರು ಬಳಲುತ್ತಿದ್ದರೂ ಅದನ್ನು ಹೆಚ್ಚಾಗಿ ಮುಚ್ಚಿಡಲಾಗುತ್ತದೆ ಅಥವಾ ನಿರ್ಲಕ್ಷಿಸಲಾಗುತ್ತದೆ. ಏಕೆಂದರೆ ಅವು ತೀವ್ರ ವರ್ತನಾ ವೈಪರೀತ್ಯದಿಂದ ಕೂಡಿರುವುದಿಲ್ಲ, ಸೂಕ್ಷ್ಮ ಕ್ರಮವಾಗಿ ಗಮನಿಸದ ಹೊರತು ತಿಳಿಯುವುದಿಲ್ಲ, ಉದಾಹರಣೆಗೆ ಮನೋಬೇನೆಗಳಾದ ಹಿಸ್ಟೀರಿಯಾ, ಗೀಳುಚಟ, ಫೋಬಿಯಾ ಇತ್ಯಾದಿಗಳು. ಇವುಗಳಲ್ಲದೆ, ಮನೋದೈಹಿಕ ರೋಗಗಳು ಅಂದರೆ ಮಾನಸಿಕ ಕಾರಣಗಳಿಂದ ದೈಹಿಕ ರೋಗಗಳು, ಅಂದರೆ ಮಾನಸಿಕ ಕಾರಣಗಳಿಂದ ದೈಹಿಕ ರೋಗಗಳು ಕಾಣಿಸಿಕೊಳ್ಳುತ್ತವೆ. ಅಲ್ಸರ್, ಅಸ್ತಮಾ, ಕಜ್ಜಿ, ಅಲರ್ಜಿಗಳು, ಮೈಗ್ರೇನ್ ತಲೆನೋವು, ಬ್ಲಡ್ ಪ್ರಷರ್ ಇತ್ಯಾದಿಗಳು ಕೆಲವು ಉದಾಹರಣೆಗಳಾಗಿವೆ. ತಮಗೆ ಅಥವಾ ತಮ್ಮ ಮನೆಯವರಿಗೆ ಮಾನಸಿಕ ಖಾಯಿಲೆಯಿದೆಯೆಂದು ಅನೇಕರು ಹೇಳಿಕೊಳ್ಳಲು ಇಷ್ಟಪಡುವುದಿಲ್ಲ. ಬೇರೆಯವರಿಗೆ ತಿಳಿದರೆ ಅವಮಾನವಾಗುತ್ತದೆ ಎಂದು ಭಾವಿಸಿ ಚಿಕಿತ್ಸೆ ಪಡೆಯಲು ಮುಂದೆ ಬರುವುದಿಲ್ಲ ಎಂಬುದು ವಿಶ್ವ ಆರೋಗ್ಯ ಸಂಸ್ಥೆಯ ಅಭಿಪ್ರಾಯ. ಹೆಚ್ಚಿನ ಮಾನಸಿಕ ಖಾಯಿಲೆಗಳಿಗೆ ಚಿಕಿತ್ಸೆ ಇದೆಯಾದರೂ ಅಂತಹ ಖಾಯಿಲೆಯಿರುವವರಲ್ಲಿ ಸುಮಾರು ಶೇಕಡ ಐವತ್ತರಷ್ಟು ವಯಸ್ಕರು ಹಾಗು ಶೇಕಡ ಐವತ್ತರಷ್ಟು ಎಂಡರಿಂದ ಹದಿನೈದು ವರ್ಷದ ಮಕ್ಕಳು ಸರಿಯಾದ ಚಿಕಿತ್ಸೆಗೆ ಒಳಗಾಗುವುದಿಲ್ಲ ಎಂಬ ವಿಷಾಧಕರ ಸಂಗತಿಯನ್ನು ಒಂದು ವರದಿ ಪ್ರಕಟಿಸಿದೆ.

**ಮಾನಸಿಕ ಖಾಯಿಲೆ ಎಂದರೇನು?**

ಒಬ್ಬ ವ್ಯಕ್ತಿಯ ಆಲೋಚನೆ, ಭಾವನೆ, ನಡೆನುಡಿ ಮತ್ತು ವರ್ತನೆಯಲ್ಲಾಗುವ ಗಂಭೀರ ಬದಲಾವಣೆಯೆ ಮಾನಸಿಕ ತೊಂದರೆ ಎಂದು ಪರಿಗಣಿಸಲಾಗುತ್ತದೆ. ವ್ಯಕ್ತಿಗೆ ಈ ರೀತಿಯ ತೊಂದರೆ ಇದ್ದರೆ ಆತನಿಗೆ ಅಥವಾ ಆಕೆಗೆ ಇತರರ ಜೊತೆ ಹಾಗು ತನ್ನ ಪರಿಸರದ ಜೊತೆಗೆ ಹೊಂದಿಕೊಂಡು ಹೋಗಲು, ಮತ್ತು ತನ್ನ ದೈನಂದಿನ ಜೀವನ ನಿಭಾಯಿಸಲು ಕಷ್ಟವಾಗುತ್ತದೆ.

**ಮಾನಸಿಕ ತೊಂದರೆ ಇರುವವರಿಗೆ ಸೂಕ್ತ**

ವೈದ್ಯಕೀಯ ಚಿಕಿತ್ಸೆ ಕೊಟ್ಟು ಆರೈಕೆ ಮಾಡುವುದರಿಂದ ಅವರು ಸಾರ್ಥಕ ತೃಪ್ತಿಕರ ಬದುಕನ್ನು ನಡೆಸಬಲ್ಲರು. ಮಾನಸಿಕ ಆರೋಗ್ಯ ತಜ್ಞರು ಅನೇಕ ಮಾನಸಿಕ ತೊಂದರೆಗಳಿಗೆ ಸರಿಯಾದ ಚಿಕಿತ್ಸೆ ಕೊಡಬಲ್ಲರು. ಹಾಗಾಗಿ ಅನುಭವಿ ತಜ್ಞರೊಬ್ಬರ ಅಭಿಪ್ರಾಯ ಪಡೆಯುವುದೆ ಮುಖ್ಯವಾದ ಮೊದಲ ಹೆಜ್ಜೆ. ಮಾನಸಿಕ ರೋಗಗಳು, ಕಾರಣಗಳು, ಪರಿಣಾಮಗಳನ್ನು ಪ್ರತಿಯೊಬ್ಬರೂ ತಿಳಿದಿದ್ದರೆ ಮಾನಸಿಕ ರೋಗಿಗಳ ಸಂಖ್ಯೆಯನ್ನು, ಹಾಗು ರೋಗದ ಪ್ರಮಾಣವನ್ನು ತಗ್ಗಿಸಬಹುದು. ಚಿಕಿತ್ಸೆಯ ಸಂಪೂರ್ಣ ಪ್ರಯೋಜನ ಪಡೆಯಬೇಕೆಂದರೆ ಮಾನಸಿಕ ತೊಂದರೆಯುಳ್ಳವರು ಸರಿಯಾದ ಚಿಕಿತ್ಸೆ ಪಡೆಯಬೇಕು. ಚಿಕಿತ್ಸೆ ಪಡೆಯಬೇಕೆಂದರೆ ಮೊದಲು ಮಾನಸಿಕ ಕಾಯಿಲೆಯ ಬಗ್ಗೆ ಮಾತನಾಡಲು ಇರುವ ಹಿಂಜರಿಕೆಯನ್ನು ಮೆಟ್ಟಿ ನಿಲ್ಲಬೇಕು. ಈ ಚಿಕಿತ್ಸೆಯಲ್ಲಿ, ತರಬೇತಿ ಪಡೆದಿರುವ ಮಾನಸಿಕ ಆರೋಗ್ಯ ತಜ್ಞರೊಂದಿಗೆ ಮಾತನಾಡುವುದೂ ಸೇರಿದೆ. ಖಾಯಿಲೆ ಯಾವುದೆಂದು ಅರ್ಥಮಾಡಿಕೊಳ್ಳಲು, ಖಾಯಿಲೆಯಿಂದಾಗಿ ದಿನವೂ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು, ಹಾಗು ಚಿಕಿತ್ಸೆಯನ್ನು ಮಧ್ಯದಲ್ಲೆ ನಿಲ್ಲಿಸದಿರಲು ಈ ತಜ್ಞರು ಸಹಾಯ ಮಾಡಬಲ್ಲರು. ಈ ತೊಂದರೆ ಇರುವವರು ತಜ್ಞರನ್ನು ಭೇಟಿಯಾದಾಗ ಕುಟುಂಬದ ಸದಸ್ಯರು ಇಲ್ಲವೆ ಮಿತ್ರರು ಧೈರ್ಯ ತುಂಬುವುದು, ಮಾನಸಿಕ ಬೆಂಬಲ ಕೊಡುವುದು ಬಹುಮುಖ್ಯ. ಇದರಿಂದಾಗಿ ಮಾನಸಿಕ ಸಮಸ್ಯೆಯುಳ್ಳ ವ್ಯಕ್ತಿ ಬಹಳ ಬೇಗ ಚಿಕಿತ್ಸೆಗೆ ಸ್ಪಂದಿಸುವುದು, ಹಾಗು ಗುಣಮುಖನಾಗುವುದು ಸಾಧ್ಯವಾಗುತ್ತದೆ.

**- ಪ್ರಶಾಂತ್ ಎನ್.ಆರ್**
ಆಪ್ತಸಹಲಾ ಮನಃಶಾಸ್ತ್ರಜ್ಞರು
ಮೊ: 9481545719



---

# ವಿನಯವೇ ಭೂಷಣ

> ■ **ವಿನಮ್ರತೆಯನ್ನು ರೂಢಿಸಿಕೊಳ್ಳಲು ನಮ್ಮಲ್ಲಿ ಕೆಲ ಬದಲಾವಣೆಗಳನ್ನು ತಂದುಕೊಳ್ಳ ಬೇಕಾಗುತ್ತದೆ. ಮೊದಲನೆಯದಾಗಿ, ನಾವು ಒಳ್ಳೆಯ ಕೇಳುಗರಾಗಬೇಕು. ಇದು ವಿನಯವಂತಿಕೆಯ ಬಹುಮುಖ್ಯ ಲಕ್ಷಣವಾಗಿದೆ. ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವುದು, ಸರಳತೆಯ ಕಡೆಗೆ ನಾವು ಇಡಬಹುದಾದ ದೊಡ್ಡ ಹೆಜ್ಜೆ. ಈ ಹೆಜ್ಜೆಯಿಡಲು ಧೈರ್ಯ ಬೇಕಾಗುತ್ತದೆ.**

ವಿನಮ್ರತೆ ಅಥವಾ ವಿನಯವನ್ನು ಹೆಚ್ಚಾಗಿ ದೌರ್ಬಲ್ಯ ಎಂಬುದಾಗಿ ಪರಿಗಣಿಸುವ ಪರಿಪಾಠವಿದೆ. ವಿನಮ್ರತೆಯೆಂದರೆ ಸರಳತೆ. ನಮ್ರತನವನ್ನು ಸಾಬೀತು ಮಾಡುವ ತುಡಿತದಿಂದ ದೂರವಿರುವುದನ್ನೇ ವಿನಮ್ರತೆ ಎನ್ನಬಹುದು. ಸಿ. ಎಸ್.ಲೂಯಿಸ್ ಎಂಬ ಲೇಖಕರು ವಿನಮ್ರತೆಯನ್ನು ಸೊಗಸಾಗಿ ವ್ಯಾಖ್ಯಾನಿಸಿರುವುದು ಹೀಗೆ: Humility isn't thinking less of yourself, it's thinking of your-self less. It's a shift from self-ob session to outward awareness

ನಾನು ಎಂಬ ಮನೋವ್ಯಾಧಿಯಿಂದ ದೂರವಿರುವುದೇ ವಿನಮ್ರತೆ. ಅಹಂಕಾರ ಮತ್ತು ಕೀಳರಿಮೆಗಳ ನಡುವಿನ ಮಾರ್ಗವೇ ವಿನಮ್ರತೆ. ಮನುಷ್ಯನ ಸುತ್ತಲಿನ ಪ್ರಭಾವಲಯವು ಹೆಚ್ಚು ಬಲಶಾಲಿಯಾದಂತೆಲ್ಲ, ಅವನ ಸಾಮಾಜಿಕ ನಡವಳಿಕೆಗಳಲ್ಲಿ ಬದಲಾವಣೆಗಳಾಗುತ್ತವೆ.

ಇಂದಿನ ವೇಗದ ಯುಗದಲ್ಲಿ ಎಲ್ಲವೂ ಕ್ಷಿಪ್ರವಾಗಿ ಜರುಗಬೇಕು ಎಂಬುದು ಮಾನವನ ನಿರೀಕ್ಷೆಯಾಗಿದೆ. ವಿನಮ್ರತೆಯು ತಾಳ್ಮೆಯ ಅಡಿಪಾಯದ ಮೇಲೆ ನಿಂತಿರುವುದರಿಂದ, ಇಂದಿನ ಲಗುಬಗೆಯ ಜಗತ್ತಿನಲ್ಲಿ ಅದೊಂದು ವಿಲಕ್ಷಣತೆ ಎನಿಸಿದರೆ ಅಚ್ಚರಿಯಿಲ್ಲ!

ನಮ್ಮ ಯಾವುದೇ ಸಂವಹನದ ಆರಂಭವು ಮಾತನ್ನು ಅವಲಂಬಿಸಿದೆ. ಅದರ ಆರಂಭವು, ಅಂತ್ಯವನ್ನೂ ನಿರ್ಧರಿಸುತ್ತದೆ. ಅಂಥ ಸಂವಹನದಲ್ಲಿ ನಾವು ಮಾತುಗಾರಿಕೆಯ ಕೌಶಲವನ್ನು ತೋರುವ ಬದಲು ಕೇಳುಗರಾಗಲು ಯತ್ನಿಸಿದರೆ ವಿನಮ್ರತೆಯ ಪಾಠವನ್ನು ನಾವು ಕಲಿತಂತೆ. ಇತರರ ಮಾತಿಗೆ ಪೂರ್ತಿ ಅವಕಾಶ ಕೊಡದೆ, ನಮ್ಮ ನಿಲುವನ್ನೇ ಪ್ರತಿಪಾದಿಸಲು ಹಟಕ್ಕೆ ಬಿದ್ದರೆ, ಅದಕ್ಕೆ ವಿನಮ್ರ ಭಾವದ ಕೊರತೆಯೇ ಕಾರಣ ಎನ್ನಬಹುದು.

ವಿನಮ್ರತೆಯನ್ನು ರೂಢಿಸಿಕೊಳ್ಳಲು ನಮ್ಮಲ್ಲಿ ಕೆಲ ಬದಲಾವಣೆಗಳನ್ನು ತಂದುಕೊಳ್ಳಬೇಕಾಗುತ್ತದೆ. ಮೊದಲನೆಯದಾಗಿ, ನಾವು ಒಳ್ಳೆಯ ಕೇಳುಗರಾಗಬೇಕು. ಇದು ವಿನಯ ವಂತಿಕೆಯ ಬಹುಮುಖ್ಯ ಲಕ್ಷಣವಾಗಿದೆ. ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವುದು, ಸರಳತೆಯ ಕಡೆಗೆ ನಾವು ಇಡಬಹುದಾದ ದೊಡ್ಡ ಹೆಜ್ಜೆ. ಈ ಹೆಜ್ಜೆಯಿಡಲು ಧೈರ್ಯ ಬೇಕಾಗುತ್ತದೆ.

ಇತರರ ಉತ್ತಮ ಗುಣ, ಪ್ರತಿಭೆ, ಕೌಶಲವನ್ನು ಗುರುತಿಸಿ ಸಂಭ್ರಮಿಸುವುದು ವಿನಮ್ರತೆಯ ಮತ್ತೊಂದು ಕುರುಹು; ಇದು ಹೃದಯ ವೈಶಾಲ್ಯತೆಯನ್ನು ಬೆಳೆಸುವುದರ ಮೂಲಕ ನಮ್ಮನ್ನು ನಿಗರ್ವಿಯಾಗಿಸುತ್ತದೆ. ಕಲಿಕೆಯಲ್ಲಿ ವಿನಮ್ರತೆಯು ವಹಿಸುವ ಪಾತ್ರವನ್ನು ಮರೆಯುವಂತಿಲ್ಲ.

ಕಲಿಕೆಯೆಂಬ ನಿರಂತರ ನೌಕಾಯಾನಕ್ಕೆ ವಿನಮ್ರತೆಯೇ ಹರಿಗೋಲು. ನಮ್ಮಲ್ಲಿ ನಾನಿನ್ನೂ ಚಿಕ್ಕವನು ಎಂಬ ಭಾವವಿದ್ದರೆ ಮಾತ್ರ ಹೊಸ ವಿಚಾರಗಳ ಕಲಿಕೆಗೆ ನಮ್ಮನ್ನು ತೆರೆದುಕೊಳ್ಳಲು ಸಾಧ್ಯ. ಕಲಿಕೆ ದಕ್ಕುವುದು ಬೋಧನೆಯಿಂದ ಮಾತ್ರವೇ ಅಲ್ಲ; ಯಾರಿಂದಾದರೂ, ಯಾವ ಸಂದರ್ಭದಿಂದಲೂ ನಾವು ಹೊಸ ಪಾಠವನ್ನು ಕಲಿಯ ಬಹುದು.



ಬದುಕಿಗಿಂತ ದೊಡ್ಡ ವಿಶ್ವ ವಿದ್ಯಾಲಯವಿಲ್ಲ; ಆದರೆ ನಮ್ಮಲ್ಲಿನ ಅಹಂ ಕರಗದಿದ್ದರೆ ಬದುಕಿನ ಸಣ್ಣ ಪುಟ್ಟ ಪಾಠಗಳನ್ನೂ ನಾವು ಕಲಿಯಲಾರೆವು. ಯುಕ್ತಿಯುಕ್ತವಾದ ಮಾತನ್ನು ಬಾಲಕನೇ ಹೇಳಿರಲಿ, ಗಿಳಿಯೇ ಹೇಳಿರಲಿ ಸ್ವೀಕರಿಸಬೇಕು; ಯುಕ್ತಿಹೀನವಾದ ಮಾತನ್ನು ವೃದ್ಧನೇ ಹೇಳಿರಲಿ, ಮುನಿಯೇ ಹೇಳಿರಲಿ ತ್ಯಜಿಸಬೇಕು ಎನ್ನುತ್ತದೆ ಸುಭಾಷಿತವೊಂದು. ಅಂದರೆ ಕಲಿಕೆಗೆ ನಾವು ಸದಾ ಸಿದ್ಧರಿರಬೇಕು, ನಮ್ಮಲ್ಲಿ ವಿನಮ್ರತೆಯಿದ್ದರೆ ಮಾತ್ರವೇ ಇದು ಸಾಧ್ಯ. ಆದರೆ, ಮನಸ್ಸೆಂಬ ಕೊಠಡಿಯ ಕಿಟಕಿ-ಬಾಗಿಲುಗಳನ್ನು ಅಹಂಕಾರದಿಂದ ಮುಚ್ಚಿದ್ದರೆ ಕಲಿಕೆಯ ಗಾಳಿ ಒಳಗೆ ತೂರುವುದಾದರೂ ಹೇಗೆ? ವಿದ್ಯಾ ದದಾತಿ ವಿನಯಂ ಎನ್ನುವಂತೆ ನಮ್ಮಲ್ಲಿ ವಿನಯವಂತಿಕೆ ಇಲ್ಲದಿದ್ದರೆ ಕಲಿತ ವಿದ್ಯೆಗೆ ಅರ್ಥವಿರುವುದಿಲ್ಲ.

ಸಾಧಕರ ಬದುಕಿನ ಕಥೆಗಳಲ್ಲಿ ಅವರ ವಿನಯಶೀಲತೆಯು ಪ್ರಧಾನ ಪಾತ್ರ ವಹಿಸಿರುವುದನ್ನು ನಾವು ಕಾಣುತ್ತೇವೆ. ತಮ್ಮಲ್ಲಿರುವ ವಿನೀತ ಭಾವದಿಂದ ಬದುಕಿನ ಪರೀಕ್ಷೆಗಳನ್ನು ಅವರುಗಳು ದಾಟಿರುವುದು ಬಹು ಸ್ಪಷ್ಟವಾಗಿ ಕಾಣುತ್ತದೆ. ಸಾಧನೆಯ ಹಾದಿಯಲ್ಲಿ ಕ್ರಮಿಸುವಾಗ ಮಾತ್ರವಲ್ಲ, ಸಾಧನೆಯ ಶಿಖರವನ್ನು ಏರಿದ ಮೇಲೂ ಅವರು ವಿನಯವಂತಿಕೆಯನ್ನು ಮೆರೆದಿದ್ದಾರೆ.

ಇಂಥವರ ಸರಳ ವರ್ತನೆಗಳು ನಮ್ಮಲ್ಲಿ ಬೆರಗು ಮೂಡಿಸುತ್ತವೆ. ಬಲಶಾಲಿಯಾದ ಆಂಜನೇಯನು ವಿನಮ್ರತೆಯ ಸಾಕಾರಮೂರ್ತಿ ಯಾಗಿದ್ದನು. ಪಂಜೆ ಮಂಗೇಶರಾಯರ ಈ ಸುಂದರ ಕವಿತೆಯಲ್ಲಿ ವಿನಮ್ರತೆಯ ಮೇರು ಮಜಲನ್ನು ಸೂರ್ಯನ ಉಪಮೆಯಿಂದ ಹೇಳಲಾಗಿದೆ-

ಏರುವನು ರವಿ ಏರುವನು
ಬಾನೊಳು ಸಣ್ಣಗೆ
ತೋರುವನು, ಏರಿದವನು
ಚಿಕ್ಕವನಿರಬೇಕೆಲೆ ಎಂಬಾ
ಮಾತನು ಸಾರುವನು.


ಸೂರ್ಯನು ಮೇಲೇರಿದಂತೆ ಚಿಕ್ಕವನಾಗಿ ಗೋಚರಿಸುತ್ತಾನೆ. ಸೃಷ್ಟಿಯು ನಮಗೆ ವಿನಮ್ರತೆಯ ಪಾಠವನ್ನು ಹೇಳುವ ಪರಿ ಇದು. ಲೌಕಿಕತೆಯ ಚೌಕಟ್ಟಿನಲ್ಲಿ ವಿನಮ್ರತೆಯ ಹಿರಿಮೆಯು ಎಷ್ಟಿದೆಯೋ, ಪಾರಮಾರ್ಥಿಕ ಸಾಧನೆಯಲ್ಲೂ ಅದರ ಪ್ರಾಮುಖ್ಯ ದುಪ್ಪಟ್ಟು ಎನ್ನಬಹುದು.

ಭಗವಂತನಲ್ಲಿ ಶರಣಾಗಬೇಕೆಂದರೆ ನಮ್ಮಲ್ಲಿ ವಿನಮ್ರತೆ ಇಲ್ಲದಿದ್ದರೆ ಅದು ಸಾಧ್ಯವೇ ಇಲ್ಲ. ನಾನು ಹೋದರೆ ಹೋದೇನು ಎಂಬ ಕನಕದಾಸರ ನುಡಿಗಳು ನಮ್ಮಲ್ಲಿರುವ ಅಹಂಕಾರದ ನಾಶವೇ ಭಗವಂತನೆಡೆಗೆ ನಮ್ಮನ್ನು ಕರೆದೊಯ್ಯಬಲ್ಲದು ಎಂಬ ಸತ್ಯವನ್ನು ಅರುಹುತ್ತವೆ.

ವಿನಮ್ರತೆಯೇ ಗುರುಕೃಪೆಗೆ ರಹದಾರಿ. ಎನಗಿಂತ ಕಿರಿಯರಿಲ್ಲ ಎಂಬ ಬಸವಣ್ಣನವರ ಹಿತನುಡಿ ನಮ್ಮ ನಿತ್ಯ ಧ್ಯೇಯವಾಗಬೇಕು. ಅದರಿಂದ ಬದುಕಿನ ಬಹುಗೊಂದಲಗಳ ನಿವಾರಣೆ ಸಾಧ್ಯವಾಗುವುದು. ವಿನಮ್ರತೆಯೆಂದರೆ ಅನ್ಯಾಯಗಳನ್ನು ಸಹಿಸಿಕೊಂಡು, ನೀತಿಬಾಹಿರ ನಡವಳಿಕೆಗಳಿಗೆ ಸೋಲುವುದು ಎಂದರ್ಥವಲ್ಲ; ವಿನಯಶೀಲತೆಯು ನಮ್ಮ ಮೊದಲ ಆದ್ಯತೆಯಾಗಬೇಕು ಎಂಬುದೇ ಅದರ ತಾತ್ಪರ್ಯವಾಗಿದೆ.

**- ವಿದ್ಯಾಶಂಕರ ಶರ್ಮ,** ಸಿದ್ದಾಪುರ

## ಇಂದು ಗುಡುಗು ಸಹಿತ ಮಳೆ ಸಾಧ್ಯತೆ



• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮುಂದಿನ ಕೆಲವು ಗಂಟೆಗಳಲ್ಲಿ ಹವಾಮಾನದಲ್ಲಿ ಏರುಪೇರಾಗಲಿದ್ದು, ಹಲವೆಡೆ ಮಾ. 21 ರಂದು ಗುಡುಗು ಸಹಿತ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿದಂತೆ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಚಾಮರಾಜನಗರ, ಕೋಲಾರ, ಮೈಸೂರು, ಹಾಸನ, ಕೊಡಗು, ರಾಮನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ.

# ಹೊಸ ಆದಾಯ ತೆರಿಗೆ ಕಾಯ್ದೆ: ಅಧಿಸೂಚನೆ

### ಬಾಡಿಗೆದಾರ, ಮಾಲೀಕನ ಹೆಸರು ಬಹಿರಂಗಪಡಿಸುವುದು ಕಡ್ಡಾಯ

• ಪ್ರಜೋದಯ ವರದಿ




**ನವದೆಹಲಿ:** ಕೇಂದ್ರ ನೇರ ತೆರಿಗೆ ಮಂಡಳಿ ಶುಕ್ರವಾರ ಹೊಸ ಆದಾಯ ತೆರಿಗೆ ಕಾಯ್ದೆ–2025ಕ್ಕೆ ಸಂಬಂಧಿಸಿದ ನಿಯಮಗಳನ್ನು ಕುರಿತು ಅಧಿಸೂಚನೆ ಹೊರಡಿಸಿದೆ. ಈ ನಿಯಮಗಳ ಪ್ರಕಾರ ವೇತನಭತ್ಯೆ ಪಡೆಯುವವರಿಗೆ ಮನೆ ಬಾಡಿಗೆ ಭತ್ಯೆ ಮೇಲೆ ಹೆಚ್ಚುವರಿ ತೆರಿಗೆ ಸೌಲಭ್ಯ ಒದಗಿಸಲಾಗಿದ್ದು, ಬಾಡಿಗೆದಾರ, ಮಾಲೀಕನ ಹೆಸರು ಬಹಿರಂಗಪಡಿಸುವುದು ಕಡ್ಡಾಯವಾಗಿರಲಿದೆ.

ಈ ಆದಾಯ ತೆರಿಗೆ ನಿಯಮಗಳು, 2026 ಏಪ್ರಿಲ್ 1ರಿಂದ ಜಾರಿಗೆ ಬರಲಿದ್ದು, ಕಳೆದ ವರ್ಷ ಸಂಸತ್ತಿನಲ್ಲಿ ಅಂಗೀಕರಿಸಲಾದ ಸರಳೀಕೃತ ನೇರ ತೆರಿಗೆ ಕಾಯ್ದೆಯನ್ನು ಕಾರ್ಯರೂಪಕ್ಕೆ ತರುವುದಾಗಿದೆ. ಗಜೆಟ್ ಅಧಿಸೂಚನೆಯ ಪ್ರಕಾರ, ಈ ನಿಯಮಗಳನ್ನು ಆದಾಯ ತೆರಿಗೆ ನಿಯಮಗಳು, 2026 ಎಂದು ಕರೆಯಲಾಗುವುದು ಮತ್ತು ಅವು 2026ರ ಏಪ್ರಿಲ್ 1ರಿಂದ ಜಾರಿಗೆ ಬರಲಿವೆ ಎಂದು ತಿಳಿಸಲಾಗಿದೆ.

2025ರ ಆಗಸ್ಟ್ 12ರಂದು ಸಂಸತ್ತು ಹೊಸ ಆದಾಯ ತೆರಿಗೆ ಮಸೂದೆಯನ್ನು ಅಂಗೀಕರಿಸಿತ್ತು. ಇದು ಸುಮಾರು ಆರು ದಶಕಗಳ ಹಳೆಯ 1961ರ ಆದಾಯ ತೆರಿಗೆ ಕಾಯ್ದೆಯನ್ನು ಬದಲಿಸುತ್ತದೆ. ಹೊಸ ಕಾಯ್ದೆಯಲ್ಲಿ ಯಾವುದೇ ಹೊಸ ತೆರಿಗೆ ದರಗಳನ್ನು ವಿಧಿಸದೇ, ಕಾನೂನಿನ ಭಾಷೆಯನ್ನು ಸರಳಗೊಳಿಸಲಾಗಿದೆ. ಈ ಕಾಯ್ದೆಯಡಿ ಅನಾವಶ್ಯಕ ಹಾಗೂ ಹಳೆಯ ವಿಧಿಗಳನ್ನು ತೆಗೆದುಹಾಕಲಾಗಿದ್ದು, ವಿಭಾಗಗಳ ಸಂಖ್ಯೆಯನ್ನು 819ರಿಂದ 536ಕ್ಕೆ ಹಾಗೂ ಅಧ್ಯಾಯಗಳನ್ನು 47ರಿಂದ 23ಕ್ಕೆ ಕಡಿತಗೊಳಿಸಲಾಗಿದೆ.

ಪದಗಳ ಸಂಖ್ಯೆ 5.12 ಲಕ್ಷದಿಂದ 2.6 ಲಕ್ಷಕ್ಕೆ ಇಳಿಸಲಾಗಿದೆ. ಜೊತೆಗೆ, ಸ್ಪಷ್ಟತೆ ಹೆಚ್ಚಿಸಲು 39 ಹೊಸ ಪಟ್ಟಿಗಳು ಮತ್ತು 40 ಹೊಸ ಸೂತ್ರಗಳನ್ನು ಪರಿಚಯಿಸಲಾಗಿದೆ. ಹೊಸ ನಿಯಮಗಳು ಮೂಲಧನ ಲಾಭ, ಷೇರು ಮಾರುಕಟ್ಟೆ ವ್ಯವಹಾರಗಳು ಮತ್ತು ಅನಿವಾಸಿ ತೆರಿಗೆ ವಿಷಯಗಳಲ್ಲಿ ಕಟ್ಟುನಿಟ್ಟಿನ ನಿಯಂತ್ರಣಗಳನ್ನು ತರಲಿದ್ದು, ಇತರ ಬಹಿರಂಗಪಡಿಸುವ ವಿಧಾನಗಳನ್ನು ಸರಳಗೊಳಿಸಿವೆ.

ಅಧಿಸೂಚನೆಯಲ್ಲಿ 150ಕ್ಕೂ ಹೆಚ್ಚು ಅಧಿಕೃತ ಫಾರ್ಮ್‌ಗಳನ್ನು ಪರಿಚಯಿಸಲಾಗಿದ್ದು, ಅವುಗಳನ್ನು ಫಾರ್ಮ್ 33ರಿಂದ ಸಂಖ್ಯೆಗೊಳಿಸಲಾಗಿದೆ. ಮನೆ ಬಾಡಿಗೆ ಭತ್ಯೆ ವಿನಾಯಿತಿಗೆ ಸಂಬಂಧಿಸಿದಂತೆ, ಮುಂಬೈ, ಕೊಲ್ಕತ್ತಾ, ದೆಹಲಿ, ಚೆನ್ನೈ, ಹೈದರಾಬಾದ್, ಪುಣೆ, ಅಹಮದಾಬಾದ್ ಮತ್ತು ಬೆಂಗಳೂರು ಸೇರಿದಂತೆ ಎಂಟು ನಗರಗಳಿಗೆ ವೇತನದ 50%ರವರೆಗೆ ವಿನಾಯಿತಿ ಲಭ್ಯವಾಗಲಿದೆ.

ಇತರೆ ಪ್ರದೇಶಗಳಿಗೆ ಇದು 40% ಆಗಿರಲಿದೆ. ಈಗಾಗಲೇ ಮುಂಬೈ, ದೆಹಲಿ, ಕೊಲ್ಕತ್ತಾ ಮತ್ತು ಚೆನ್ನೈ ನಗರಗಳಲ್ಲಿ 50% ವಿನಾಯಿತಿ ಇದ್ದು, ಇತರೆ ನಗರಗಳಲ್ಲಿ 40% ಅನ್ವಯವಾಗುತ್ತದೆ. ಹೊಸ ನಿಯಮಗಳ ಪ್ರಕಾರ, ತೆರಿಗೆ ವಿನಾಯಿತಿ ಪಡೆಯಲು ಬಾಡಿಗಾರಮಾಲೀಕರ ಸಂಬಂಧವನ್ನು ಬಹಿರಂಗಪಡಿಸುವುದು ಕಡ್ಡಾಯವಾಗಿದೆ.

ವಿದೇಶೀ ಆದಾಯದ ತೆರಿಗೆ ಕ್ರೆಡಿಟ್‌ಗಳ ಪರಿಶೀಲನೆಯಲ್ಲಿ ಕಂಪನಿಗಳು ಮತ್ತು ಆಡಿಯಿಟರ್‌ಗಳ ಜವಾಬ್ದಾರಿಯನ್ನೂ ಹೆಚ್ಚಿಸಲಾಗಿದೆ.ಇದಲ್ಲದೆ, ಪಾನ್ ನಕಲು ಪ್ರಕರಣಗಳ ಪರಿಶೀಲನೆ ಮತ್ತು ಆಡಿಯಿಟ್‌ನಲ್ಲಿ ಕಂಡುಬರುವ ಅಸಂಗತತೆಗಳಿಂದ ಉಂಟಾಗುವ ತೆರಿಗೆ ಹೊಣೆಗಾರಿಕೆಯನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಆಡಿಯಿಟರ್‌ಗಳಿಗೆ ನೀಡಲಾಗಿದೆ.

ಆಸ್ತಿಗಳ ಹಿಡಿತ ಅವಧಿಯನ್ನು ಲೆಕ್ಕಿಸುವ ವಿಧಾನವನ್ನು ಸ್ಪಷ್ಟಪಡಿಸಲಾಗಿದ್ದು, ಇದರಿಂದ ಲಾಭವು ಕಡಿಮೆ ಅವಧಿಯದಾ ಅಥವಾ ದೀರ್ಘಾವಧಿಯದಾ ಎಂಬುದನ್ನು ನಿರ್ಧರಿಸಲು ಸಹಾಯವಾಗಲಿದೆ.

ಶೇರುಗಳು ಅಥವಾ ಡಿಬೆಂಚರ್‌ಗಳಂತಹ ಪರಿವರ್ತಿತ ಪಾವತಿಗಳಲ್ಲಿ, ಮೂಲ ಹೂಡಿಕೆ ಸಾಧನವನ್ನು ಹಿಡಿದಿದ್ದ ಅವಧಿಯನ್ನೂ ಸೇರಿಸಿ ಹಿಡಿತ ಅವಧಿಯನ್ನು ಲೆಕ್ಕಿಸಲಾಗುವುದು ಎಂದು ನಿಯಮಗಳು ಸ್ಪಷ್ಟಪಡಿಸಿವೆ.

## ಸಂಭ್ರಮದ ಯುಗಾದಿ ಹಬ್ಬ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಚನ್ನೇನಹಳ್ಳಿ ಗ್ರಾಮದಲ್ಲಿ ಯುಗಾದಿ ಹಬ್ಬವನ್ನು ಭಕ್ತಿಭಾವ ಮತ್ತು ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಹೊಸ ಸಂವತ್ಸರದ ಅಂಗವಾಗಿ ಗ್ರಾಮಸ್ಥರು ಸಂಪ್ರದಾಯಬದ್ಧವಾಗಿ ಹೊನ್ನಾರು ಕಟ್ಟುವ ಮೂಲಕ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಗ್ರಾಮದಲ್ಲಿ ಮಳೆ–ಬೆಳೆ ಸಮೃದ್ಧಿಯಾಗಲಿ, ಜನರಿಗೆ ಸುಖ– ಶಾಂತಿ ನೆಲೆಸಲಿ ಎಂದು ಕೋರಿದರು.

ಗ್ರಾಮದಲ್ಲಿ ಯಾವುದೇ ಜಾತಿ–ಮತ ಭೇದಭಾವವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಗ್ರಾಮೀಣ ಏಕತೆ ಮತ್ತು ಸೌಹಾರ್ದತೆಯ ಪ್ರತೀಕವಾಗಿ ಕಾಣಿಸಿಕೊಂಡಿತು. ಈ ವರ್ಷ ಆನಂದ್ ಚನ್ನೇನಹಳ್ಳಿ ಹಾಗೂ ಮಂಜಣ್ಣ ಅವರು ಹೊನ್ನಾರು ಕಾರ್ಯಕ್ರಮವನ್ನು ಸಮರ್ಪಕವಾಗಿ ನಡೆಸಿಕೊಟ್ಟರು.

ಕಾರ್ಯಕ್ರಮದ ವೇಳೆ ಗ್ರಾಮದ ಹಿರಿಯರು, ಮುಖಂಡರು, ಮಹಿಳೆಯರು ಮತ್ತು ಮಕ್ಕಳು ಉತ್ಸಾಹದಿಂದ ಭಾಗವಹಿಸಿ ಕೇಕೆಸಿಳ್ಳೆ, ಚಪ್ಪಾಳೆ ಹೊಡೆದು ಸಂಭ್ರಮಿಸಿದರು. ಹಬ್ಬದ ಉಲ್ಲಾಸ ಎಲ್ಲೆಡೆ ಮೂಡಿಬಂದಿದ್ದು, ನವ ಸಂವತ್ಸರವನ್ನು ಆತ್ಮೀಯವಾಗಿ ಸ್ವಾಗತಿಸಿದರು.

## ಜನಗಣತಿ ಹೆಸರಿನಲ್ಲಿ ಪೌರತ್ವ ಕಸಿದುಕೊಳ್ಳುವ ಹುನ್ನಾರ

• ಪ್ರಜೋದಯ ವರದಿ



**ಕೋಲ್ಕತ್ತಾ:** ಮುಂಬರುವ ವಿಧಾನ ಸಭಾ ಚುನಾವಣೆ ಬಳಿಕ ಕೇಂದ್ರ ಸರ್ಕಾರ ಎನ್‌ಆರ್‌ಸಿ ಮತ್ತು ಜನಗಣತಿಯ ಹೆಸರಿನಲ್ಲಿ ಜನರ ಪೌರತ್ವ ಕಸಿದುಕೊಳ್ಳಲು ಯೋಜಿಸುತ್ತಿದೆಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಶುಕ್ರವಾರ ಆರೋಪಿಸಿದ್ದಾರೆ.

ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದ ಚುನಾವಣಾ ಪ್ರಣಾಳಿಕೆ ಬಿಡುಗಡೆ ಸಂದರ್ಭದಲ್ಲಿ ಮಾತನಾಡಿದ ಅವರು, ಚುನಾವಣೆ ಮುಗಿದ ತಕ್ಷಣ ಎನ್‌ಆರ್‌ಸಿ ಜಾರಿಗೊಳಿಸುವ ಮೂಲಕ ಜನರ ಹಕ್ಕುಗಳನ್ನು ಕಸಿದುಕೊಳ್ಳುವ ಸಂಚು ನಡೆಯುತ್ತಿದೆ. ಈ ಬಗ್ಗೆ ಜನರು ಜಾಗರೂಕರಾಗಿರಬೇಕೆಂದರು. ರಾಜ್ಯದಲ್ಲಿ ಚುನಾವಣೆಗೂ ಮುನ್ನವೇ ಅಘೋಷಿತ ರಾಷ್ಟ್ರಪತಿ ಆಳ್ವಿಕೆ ಹೇರಲಾಗಿದೆ ಎಂದು ಅವರು ಕಿಡಿಕಾರಿದ್ದಾರೆ.

ಬಿಜೆಪಿ ಗೆಲುವಿಗೆ ಪೂರಕವಾದ ವಾತಾವರಣ ನಿರ್ಮಿಸಲು ಚುನಾವಣಾ ಆಯೋಗವು ರಾಜ್ಯದ ಅಧಿಕಾರಿಗಳನ್ನು ವರ್ಗಾವಣೆ ಮಾಡುತ್ತಿದೆ. ಈ ಮೂಲಕ ಹಣ ಮತ್ತು ಶಸ್ತ್ರಾಸ್ತ್ರಗಳನ್ನು ಬಂಗಾಳಕ್ಕೆ ಅಕ್ರಮವಾಗಿ ಸಾಗಿಸಲು ದಾರಿ ಮಾಡಿಕೊಡಲಾಗುತ್ತಿದೆಂದು ಆರೋಪಿಸಿದ್ದಾರೆ.

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸುವ ಉದ್ದೇಶದಿಂದಾಗಿ ಕೇಂದ್ರದೊಂದಿಗೆ ಕೈಜೋಡಿಸಿರುವ ಚುನಾವಣಾ ಆಯೋಗವು ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಆರಂಭಿಸಲು ಯೋಜಿಸುತ್ತಿದೆ ಎಂದು ದೂರಿದ್ದಾರೆ.

ಎಸ್.ಐ.ಆರ್. ಪ್ರಕ್ರಿಯೆಯಲ್ಲಿ ಒಂದು ನಿರ್ದಿಷ್ಟ ಸಮುದಾಯದ ಜನರನ್ನು ಗುರಿಯಾಗಿಸಲಾಗುತ್ತಿದೆ. ಸುಮಾರು 60 ಲಕ್ಷ ಪ್ರಕರಣಗಳಲ್ಲಿ 22 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿದ್ದರೆ, ಇನ್ನೂ 10 ಲಕ್ಷಕ್ಕೂ ಹೆಚ್ಚು ಹೆಸರುಗಳನ್ನು ಅಳಿಸಿ ಹಾಕಲಾಗಿದೆ ಎಂದು ಆರೋಪಿಸಿರುವ ಮಮತಾ, ಚುನಾವಣೆಯಲ್ಲಿ ಸೋಲುವ ಭೀತಿಯಿಂದಲೇ ಬಿಜೆಪಿ ಇಂತಹ ಕಾರ್ಯಗಳಿಗೆ ಮುಂದಾಗಿದೆ ಎಂದಿದ್ದಾರೆ.

## ಮಾ.23 ರಂದು ದೇವರ ದಾಸಿಮಯ್ಯ ಜಯಂತಿ

**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಮಾ.23 ರಂದು ಹಾಸನಾಂಬ ಕಲಾಕ್ಷೇತ್ರದಲ್ಲಿ ಬೆಳಿಗ್ಗೆ 11 ಗಂಟೆಗೆ ದೇವರ ದಾಸಿಮಯ್ಯ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ಕಾರ್ಯಕ್ರಮವ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಅರಸೀಕೆರೆ ಕ್ಷೇತ್ರದ ಶಾಸಕರಾದ ಕೆ.ಎಂ ಶಿವಲಿಂಗೇಗೌಡ ಗೌರವ ಉಪಸ್ಥಿತರಿರಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಶಾಸಕರು ಭಾಗವಹಿಸಲಿದ್ದಾರೆ.

## ಚನ್ನಕೇಶವಸ್ವಾಮಿಗೆ ರತ್ನಖಚಿತ ಚಿನ್ನಾಭರಣ ಧಾರಣೆ

• ಪ್ರಜೋದಯ ವರದಿ



**ಬೇಲೂರು:** ವಿಶ್ವ ಪ್ರಸಿದ್ಧ ಬೇಲೂರು ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವ ಆರಂಭದ ಮುನ್ನ ನವ ಸಂವತ್ಸರ ಯುಗಾದಿ ದಿನ ಚೆಲುವ ಚನ್ನಿಗನಿಗೆ ಖಜಾನೆಯಿಂದ ತಂದ ರತ್ನಖಚಿತ ಚಿನ್ನಾಭರಣಗಳನ್ನು ತೊಡಿಸಿ, ವಿವಿಧ ಹೂವುಗಳಿಂದ ಅಲಂಕರಿಸಲಾಗಿತ್ತು.

ಹಬ್ಬದ ದಿನ ಸಂಜೆ ಸೌಮ್ಯ ನಾಯಕಿ ಮತ್ತು ರಂಗನಾಯಕಿ ಅಮ್ಮನವರೊಂದಿಗೆ ಚನ್ನಕೇಶವ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇಗುಲ ಹಾಗು ವೈಕುಂಠ ಬೀದಿಯ ಎಂಟು ಮೂಲೆಯಲ್ಲಿ ಭವ್ಯ ಮೆರವಣಿಗೆ ನಡೆಸಲಾಯಿತು. ಹಿಂದೂ ಪಂಚಾಂಗದ ಪ್ರಕಾರ, ಪ್ರತಿವರ್ಷ ಯುಗಾದಿ ಬಳಿಕವೇ ಶಿಲ್ಪಕಲೆಗಳ ತವರು ಬೇಲೂರಿನ ಚನ್ನಕೇಶವಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಚಾಲನೆ ನೀಡುವ ಮೂಲಕ ಧಾರ್ಮಿಕ ಕಾರ್ಯಗಳಿಗೆ ಮುನ್ನುಡಿ ಬರೆಯುವ ವಾಡಿಕೆ ಹೊಯ್ಸಳರು, ವಿಜಯನಗರ ಅರಸರು ಮತ್ತು ಮೈಸೂರು ಒಡೆಯರ ಕಾಲದಿಂದ ನಡೆದುಕೊಂಡು ಬಂದಿದೆ ಎಂದರು.

ಯುಗಾದಿ ಮುನ್ನವೇ ಖಜಾನೆಯಿಂದ ತಂದ ರತ್ನಾಭರಣಗಳನ್ನು ತಹಶೀಲ್ದಾರ್ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದ ಬಳಿಕ ಅರ್ಚಕರಿಗೆ ಹಸ್ತಾಂತರ ಮಾಡಲಾಗುತ್ತದೆ. ಮರು ದಿನ ಯುಗಾದಿ ಹಬ್ಬದಂದು ಚನ್ನಕೇಶವ ಮತ್ತು ಅಮ್ಮನವರಿಗೆ ವಿವಿಧ ಅಭಿಷೇಕಗಳನ್ನು ನೆರವೇರಿಸಿದ ಬಳಿಕ ಒಡವೆಗಳನ್ನು ತೊಡಿಸಿ, ವಿವಿಧ ಹೂವಿನ ಪುಷ್ಪಗಳಿಂದ ಅಲಂಕರಿಸಿ ಮಹಾಮಂಗಳಾರತಿ ನಡೆಸಲಾಗುತ್ತದೆ. ನಂತರ ಭಕ್ತರಿಗೆ ತೀರ್ಥ– ಪ್ರಸಾದ ವಿತರಿಸಿ, ನೂತನ ವರ್ಷದ ಪಂಚಾಂಗ ಶ್ರವಣ ಮಾಡಿಸಿ, ಎಂಟು ಮೂಲೆಯಲ್ಲಿ ಕೇಶವನ ಉತ್ಸವ ಮೂರ್ತಿಯನ್ನು ಭವ್ಯ ಮೆರವಣಿಗೆ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ದೇಗುಲಕ್ಕೆ ಸಂಬಂಧಪಟ್ಟ ಅಡ್ಡೆಗಾರರು ಹಾಗು ಇತರರು ತಮ್ಮ ಸೇವಾ ಕಾರ್ಯಗಳನ್ನು ನಿರ್ವಹಿಸುತ್ತಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಆಗಮಿಕರಾದ ಶ್ರೀನಿವಾಸ್ ಭಟ್ ಅವರು, ಬೇಲೂರು ವಿಶ್ವದ ಭೂಪಟದಲ್ಲಿ ತನ್ನದೇ ಆದ ಖ್ಯಾತಿ ಪಡೆದಿರುವಂತೆ ಇಲ್ಲಿನ ಚನ್ನಕೇಶವ ಸ್ವಾಮಿಗೂ ಅಪಾರ ಭಕ್ತರಿದ್ದಾರೆ. ಪ್ರತಿವರ್ಷ ನಡೆಯುವ ಬ್ರಹ್ಮರಥೋತ್ಸವ ಹಾಗೂ ನಾಡರಥೋತ್ಸವಕ್ಕೆ ದೂರ ದೂರಿನಿಂದ ಭಕ್ತರು ಆಗಮಿಸುತ್ತಾರೆ. ಈ ಬಾರಿ ಕೂಡ ಜಿಲ್ಲಾಡಳಿತ ಜಾತ್ರೆಯನ್ನು ಯಶಸ್ವಿಯಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಂಡಿದ್ದು, ಮಾ.23ರಂದು ವಿವಿಧ ಉತ್ಸವಗಳು ನಡೆಯಲಿವೆ ಎಂದು ತಿಳಿಸಿದರು.

## ಬೇಸಿಗೆ ಶಿಬಿರಕ್ಕೆ ಅರ್ಜಿ ಅಹ್ವಾನ

• ಪ್ರಜೋದಯ ವರದಿ




**ಹಾಸನ:** 2026ನೇ ಸಾಲಿನಲ್ಲಿ ಜಿಲ್ಲಾ ಬಾಲಭವನ ಯೋಜನೆಯಡಿ 6 ರಿಂದ 16 ವರ್ಷದೊಳಗಿನ ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಉಚಿತವಾಗಿ ಹಾಗೂ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ರೂ. 100 ಶುಲ್ಕದೊಂದಿಗೆ 200 ಮಕ್ಕಳ ಮಿತಿಯೊಳಗೆ 25 ದಿನಗಳ ಯೋಗ, ಸಂಗೀತ, ನೃತ್ಯ, ಅಬಕಾಸ್, ಆತ್ಮ ರಕ್ಷಣಾ ಕಲೆ, ಕರಾಟೆ, ಗಾಳಿಪಟ ತಯಾರಿ/ಕ್ರಾಫ್ಟ್, ಕ್ಯಾಲಿಗ್ರಾಫಿ, ಹಾಸ್ಯ ಮತ್ತು ಶೈಕ್ಷಣಿಕ ಚಲನಚಿತ್ರ ವೀಕ್ಷಣೆ, ವಾರ್ಲಿಕಲೆ, ಸ್ಪೋಕನ್ ಇಂಗ್ಲೀಷ್, ಬಾಲಕರ ರಂಗೋಲಿ ಸ್ಪರ್ಧೆ ಮತ್ತು ಸಾಂಸ್ಕೃತಿಕ ದಿನ ಈ ಚಟುವಟಿಕೆಗಳನ್ನೊಳಗೊಂಡ ಬೇಸಿಗೆ ಶಿಬಿರ ಚಟುವಟಿಕೆಗಳನ್ನು ಆಯೋಜಿಸಲಾಗುತ್ತಿದೆ

ಆಸಕ್ತಿಯುಳ್ಳ ಮಕ್ಕಳು ಬೇಸಿಗೆ ಶಿಬಿರಕ್ಕೆ ಹೆಸರನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮಾ.25 ರೊಳಗೆ ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08172–267218 ಬಾಲ ಭವನ ಕಾರ್ಯಕ್ರಮ ಸಂಯೋಜಕರು: 8197132944 ಹಾಗೂ ಕಚೇರಿ ಸಹಾಯಕರು; 8495839556 ರನ್ನು ಸಂಪರ್ಕಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಕರು ತಿಳಿಸಿದ್ದಾರೆ.

## ಭಾರತದಲ್ಲಿ ಪ್ರೀಮಿಯಂ ಪೆಟ್ರೋಲ್ ದರ ಏರಿಕೆ

• ಪ್ರಜೋದಯ ವರದಿ



ಪ್ರೀಮಿಯಂ ಇಂಧನಗಳ ಬೆಲೆಯನ್ನು ಪ್ರತಿ ಲೀಟರ್‌ಗೆ 2.09ರಿಂದ 2.35 ರೂಪಾಯಿವರೆಗೆ ಹೆಚ್ಚಿಸಿವೆ.

**ನವದೆಹಲಿ:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯಿಂದಾಗಿ ಜಾಗತಿಕ ಇಂಧನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ. ಇದರ ನೇರ ಪರಿಣಾಮವಾಗಿ ಭಾರತದಲ್ಲಿ ಪ್ರೀಮಿಯಂ ಪೆಟ್ರೋಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 2.35 ರೂಪಾಯಿವರೆಗೆ ಏರಿಕೆ ಮಾಡಲಾಗಿದೆ. ಈ ಪರಿಷ್ಕೃತ ದರಗಳು ಇಂದಿನಿಂದ ಮಾರ್ಚ್ 20, 2026ರಿಂದ ಜಾರಿಗೆ ಬಂದಿವೆ ಎಂದು ತಿಳಿದು ಬಂದಿದೆ.

ಮೂಲಗಳ ಪ್ರಕಾರ, ಭಾರತದ ಪ್ರಮುಖ ತೈಲ ಕಂಪನಿಗಳು ತಮ್ಮ ಪ್ರೀಮಿಯಂ ಪೆಟ್ರೋಲ್ ದರವನ್ನು ಏರಿಕೆ ಮಾಡಿವೆ. ಭಾರತೀಯ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್, ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಕಂಪನಿಗಳು ತಮ್ಮ ಪ್ರೀಮಿಯಂ ಇಂಧನಗಳ ಬೆಲೆಯನ್ನು ಪ್ರತಿ ಲೀಟರ್‌ಗೆ 2.09ರಿಂದ 2.35 ರೂಪಾಯಿವರೆಗೆ ಹೆಚ್ಚಿಸಿವೆ.

ಪ್ರೀಮಿಯಂ ಪೆಟ್ರೋಲ್ ದರ ಏರಿಕೆ ಪ್ರಸ್ತುತ ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ದರಗಳಲ್ಲಿ ಯಾವುದೇ ಬದಲಾವಣೆ ಮಾಡಲಾಗಿಲ್ಲ. ಬೆಲೆ ಏರಿಕೆಯು ಕೇವಲ ಪ್ರೀಮಿಯಂ ಇಂಧನಗಳಿಗೆ ಮಾತ್ರ ಸೀಮಿತವಾಗಿದ್ದು, ಸಾಮಾನ್ಯ ವಾಹನ ಸವಾರರಿಗೆ ಸದ್ಯಕ್ಕೆ ಯಾವುದೇ ಹೊಸ ಹೊರೆ ಉಂಟಾಗಿಲ್ಲ ಎಂದು ತಿಳಿದು ಬಂದಿದೆ.

ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು ಈ ಬಗ್ಗೆ ಮಾತನಾಡಿದ್ದು, ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಈಗ ನಿಯಂತ್ರಣ ಮುಕ್ತವಾಗಿದ್ದ, ಅವುಗಳನ್ನು ಸರ್ಕಾರ ನಿರ್ಧರಿಸುವುದಿಲ್ಲ. ಅಂತಾರಾಷ್ಟ್ರೀಯ ಮಾರುಕಟ್ಟೆಯ ಸ್ಥಿತಿಗತಿಗಳನ್ನು ಆಧರಿಸಿ ತೈಲ ಮಾರುಕಟ್ಟೆ ಕಂಪನಿಗಳೇ ಇಂಧನ ದರಗಳನ್ನು ನಿರ್ಧರಿಸುತ್ತವೆ ಎಂದು ಅವರು ತಿಳಿಸಿದ್ದಾರೆ. 'ಸಾಮಾನ್ಯ ಪೆಟ್ರೋಲ್ ದರ ಏರಿಕೆಯಾಗಿಲ್ಲ' ಸಾಮಾನ್ಯ ಪೆಟ್ರೋಲ್ ದರದಲ್ಲಿ ಯಾವುದೇ ಬದಲಾವಣೆ ಇಲ್ಲ, ಕೇವಲ ಪ್ರೀಮಿಯಂ ವಿಭಾಗದ ಇಂಧನ ದರ ಮಾತ್ರ ಏರಿಕೆಯಾಗಿದೆ. ಒಟ್ಟು ಪೆಟ್ರೋಲ್ ಬಳಕೆಯಲ್ಲಿ ಈ ಪ್ರೀಮಿಯಂ ವರ್ಗದ ಪಾಲು ಕೇವಲ ಶೇಕಡ 2ರಿಂದ 4 ರಷ್ಟು ಮಾತ್ರ ಇದೆ. ಎಂದು ಹೇಳಿದರು.

ಇನ್ನು ಮುಂದಿನ ದಿನಗಳಲ್ಲಿ ಸಾಮಾನ್ಯ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಏರಿಕೆಯಾಗಲಿವೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಸದ್ಯಕ್ಕೆ ಅಂತಹ ಯಾವುದೇ ಬದಲಾವಣೆ ಇಲ್ಲ ಎಂದು ಹೇಳಿದ್ದಾರೆ. ಮಾರ್ಚ್ 19ರಂದು ಬೆಂಗಳೂರು ಸೇರಿ ರಾಜ್ಯದ ಇತರ ಜಿಲ್ಲೆಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಎಷ್ಟಿದೆ ತಿಳಿಯಿರಿ ಇಂಧನ ಮಾರುಕಟ್ಟೆಗೆ ದೊಡ್ಡ ಹೊಡೆತ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಯು ಮಧ್ಯಪ್ರಾಚ್ಯದಲ್ಲಿ ಭಾರಿ ದೊಡ್ಡ ಮಟ್ಟದಲ್ಲಿ ಬೆಂಕಿ ಜ್ವಾಲೆಯಂತೆ ಯುದ್ಧದ ಕಿಚ್ಚನ್ನು ಹುಟ್ಟುಹಾಕಿದೆ. ಇದರ ಪರಿಣಾಮವಾಗಿ ಇಡೀ ಗಲ್ಫ್ ಪ್ರದೇಶದಲ್ಲಿ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳು ಮುಂದುವರೆದಿದ್ದು, ಇದರಿಂದ ಜಾಗತಿಕ ಇಂಧನ ಮಾರುಕಟ್ಟೆಗೆ ದೊಡ್ಡ ಹೊಡೆತ ಬಿದ್ದಿದೆ.

ಅಮೆರಿಕ– ಇಸ್ರೇಲ್ ದಾಳಿಯ ನಂತರ, ಇಡೀ ಗಲ್ಫ್ ವಲಯದಲ್ಲಿ ಪರಸ್ಪರ ಡ್ರೋನ್ ಮತ್ತು ಕ್ಷಿಪಣಿ ದಾಳಿಗಳು ತೀವ್ರಗೊಂಡಿವೆ.




• ಪ್ರಜೋದಯ ವರದಿ

**ಹಾಸನ:** ನಗರದ ಬೆಸ್ಟ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಚೆಗೆ ಬಿ.ಸಿ.ಎ ವಿಭಾಗದ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಡಾ. ಮಂಜುನಾಥ್ ಗುರುಜಿ ಅವರು ಮಾತನಾಡಿ, ವಿದ್ಯಾರ್ಥಿಗಳು ಅಗತ್ಯವಾಗಿ ವಿಜ್ಞಾನದ ಆವಿಷ್ಕಾರ ಮತ್ತು ಮಹತ್ವದ ಬಗ್ಗೆ ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದು.

ಕಾಲೇಜಿನ ಪ್ರಾಂಶುಪಾಲ ಕೆ.ಸಿ.ನವೀನ್ ಅಧ್ಯಕ್ಷತೆ ವಹಿಸಿದ್ದರು, ಬಿ.ಸಿ.ಎ. ವಿಭಾಗದ ಮುಖ್ಯಸ್ಥ ಕೆ.ಎನ್. ಮಹೇಶ್, ಆಡಳಿತಾಧಿಕಾರಿಗಳಾದ ಡಾ.ನಿತ್ಯಾನಂದ ಎಂ.ಡಿ. ಮತ್ತು ಡಾ.ವಿಕ್ರಮ್ ಹಾಗೂ ಕಾಲೇಜಿನ ಉಪನ್ಯಾಸಕರು ಹಾಜರಿದ್ದರು.

## ಮಾ.23 ಕ್ಕೆ ವಿಶ್ವ ಗ್ರಾಹಕರ ದಿನಾಚರಣೆ


**ಹಾಸನ:** ನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾ.23 ರಂದು ಬೆಳಿಗ್ಗೆ 11 ಗಂಟೆಗೆ ವಿಶ್ವ ಗ್ರಾಹಕರ ದಿನಾಚರಣೆಯನ್ನು ಆಯೋಜಿಸಲಾಗಿದೆ.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷರಾದ ಸಿ.ಎಂ. ಚಂಚಲ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಪಂ ಸಿ.ಇ.ಒ. ಪೂರ್ಣಿಮಾ, ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಾಕ್ಷಾಯಿಣಿ ಭಾಗವಹಿಸಲಿದ್ದಾರೆ.

ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಕಾರ್ಯಧ್ಯಕ್ಷ ವೈ.ಎಸ್.ಸಿದ್ದಯ್ಯ ಅವರು ಉಪನ್ಯಾಸ ನೀಡಲಿದ್ದಾರೆ.

## ಸಾಮರಸ್ಯದಿಂದ ನೆರವೇರಿದ ಶ್ರೀ ರಾಮೇಶ್ವರ ಕರಗ ಉತ್ಸವ

• ಪ್ರಜೋದಯ ವರದಿ



**ಹೊಳೆನರಸೀಪುರ:** ಸಂಭ್ರಮದ ಯುಗಾದಿ ದಿನದಂದು ಸುತ್ತಲಿನ ಹತ್ತಾರು ಗ್ರಾಮಗಳು ಸಾಮರಸ್ಯದಿಂದ ನೆರವೇರಿಸುವ ಶ್ರೀ ರಾಮೇಶ್ವರ ಕರಗ ಉತ್ಸವವು ಶ್ರದ್ಧಾಭಕ್ತಿಯಿಂದ ನರವೇರಿಸಲಾಯಿತು.

ತಾಲೂಕಿನ ಕಡವಿನಹೊಸಹಳ್ಳಿ, ಬಾಗೀವಾಳು ಗ್ರಾಮಗಳಲ್ಲಿ ಕರಗ ಸೇವೆ ನಡೆಸಲಾಗುತ್ತದೆ. ಸುತ್ತಲಿನ ಕಡವಿನಕೋಟೆ, ಶ್ರೀರಾಮನಗರ ಹಾಗೂ ಪಟ್ಟಣದಿಂದಲೂ ಭಕ್ತರು ಸೇರಿ ನೆರವೇರಿಸುವರು. ಬಾಗೀವಾಳು ಗ್ರಾಮದಲ್ಲಿನ ಶ್ರೀ ರಾಮೇಶ್ವರ ದೇಗುಲದಲ್ಲಿ ಪೂಜೆ ನಂತರ ಹೇಮಾವತಿ ನದಿ ತಟದಲ್ಲಿ ಬಿಂದಿಗೆಯ ಕಳಸವನ್ನು ತಲೆಯ ಮೇಲೆ ಹೊತ್ತು ಕಡವಿನಹೊಸಹಳ್ಳಿ ಗ್ರಾಮದ ದೇವಾಲಯ ಮತ್ತು ಬೀದಿಗಳಲ್ಲಿ ಕರಗ ಸೇವೆ ನಡೆಸಲಾಯಿತು.

ಪುರಾತನ ಕಾಲದಿಂದಲೂ ನಡೆದು ಬಂದ ಪ್ರತೀತಿಯಂತೆ ಕರಗ ಸೇವೆ ನಡೆಸುವ ಮನೆತನದ ಒಬ್ಬ ಕರಗ ಹೊರುವ ಪದ್ಧತಿ ಅನುಸರಿಸುವರು. ಕಳೆದ 21 ದಿನಗಳಿಂದ ವ್ರತಬದ್ಧರಾಗಿ ನಿಯಮಿತ ಫಲಾಹಾರದೊಂದಿಗೆ ಸಮತೋಲನ ಕಾಯ್ದುಕೊಂಡು ಕರಗ ಹೊರಲಾಗುತ್ತದೆ. ಭಕ್ತರು ಕರಗ ಸೇವೆಯನ್ನು ಕಣ್ತುಂಬಿಕೊಂಡು ದೇವರಿಗೆ ಹರಕೆ ರೂಪದ ಕಾಣಿಕೆ ಸಮರ್ಪಿಸುವರು.

ಕಡವಿನಹೊಸಹಳ್ಳಿ ಗ್ರಾಮದ ಶ್ರೀ ಬಸವೇಶ್ವರ, ಶ್ರೀ ಆಂಜನೇಯ ಹಾಗೂ ಗ್ರಾಮ ದೇವತೆಯ ದೇವಾಲಯಗಳಲ್ಲಿ ವಿಶೇಷ ಪೂಜೆ ನೆರವೇರಿಸಲಾಗುತ್ತದೆ. ಬಿಂದಿಗೆ ಜಾತ್ರೆ, ಹೆಸರಿನ ಕರಗ ಮಹೋತ್ಸವಕ್ಕೆ ಸಾವಿರಾರು ಜನರು ಸೇರುವ ಕಾರಣ ನಾಟಕ ಪ್ರದರ್ಶನ, ಭಕ್ತರಿಗೆ ಪ್ರಸಾದ ನೆರವೇರಿಸಲಾಗುವುದು. ಎರಡೂ ಗ್ರಾಮದಲ್ಲಿ ಹಬ್ಬದ ವಾತಾವರಣದೊಂದಿಗೆ ಯುಗಾದಿ ದಿನ ಸಂಜೆ ಕರಗ ಸೇವೆ ಉತ್ಸವ ಮನೋಜ್ಞವಾಗಿ ನಡೆಯಿತು. ಜಾತಿ ಬೇದ ಇಲ್ಲದೆ, ಸುತ್ತಲಿನ ಗ್ರಾಮಗಳ ಎಲ್ಲ ಸಮುದಾಯದವರು ಜಾತ್ರೆ, ಉತ್ಸವದಲ್ಲಿ ಭಾಗಿಯಾಗಿದ್ದರು.

ಕರಗ ತಲೆಯ ಮೇಲೆ ಹೊತ್ತು ಸಾಗುವ ವ್ರತಾಚರಣೆ ನಡೆಸುವರು. ನಂತರ ಕಾಲಿಗೆ ಗೆಜ್ಜೆ ಕಟ್ಟಿ, ಕೈಯಲ್ಲಿ ಕತ್ತಿಯೊಂದಿಗೆ ವಾದ್ಯದ ಸದ್ದಿನೊಂದಿಗೆ ಸರ ಸರ ಹೆಜ್ಜೆ ಹಾಕುತ್ತಾ ಗ್ರಾಮದ ದೇವಾಲಯದ ಸುತ್ತಲೂ ಸರಿದಾಡುವರು. ಇಂತಹ ಅಪರೂಪದ ಕ್ಷಣಕ್ಕೆ ಸಾವಿರಾರು ಭಕ್ತ ಸಾಮೂಹವು ಸಾಕ್ಷಿಯಾಗಿದ್ದಿತು.

## ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹಾಸನ:** ಜನವರಿ 2027ನೇ ಸಾಲಿನ ಅಧಿವೇಶನಕ್ಕಾಗಿ ಉತ್ತರಾಖಂಡ ರಾಜ್ಯದ ಡೆಹರಾಡೂನ್‌ನಲ್ಲಿರುವ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ 8ನೇ ತರಗತಿಗಾಗಿ ಪ್ರವೇಶ ಬಯಸುವ ಕರ್ನಾಟಕ ರಾಜ್ಯದ ಬಾಲಕ ಮತ್ತು ಬಾಲಕಿ ಯರಿಗೆ ಅರ್ಹತಾ ಪ್ರವೇಶ ಪರೀಕ್ಷೆ ಯನ್ನು ದಿನಾಂಕ: 7 ಜೂನ್ 2026 ರಂದು ಬೆಂಗಳೂರು ಕೇಂದ್ರದಲ್ಲಿ ನಿಗದಿಪಡಿಸಲಾಗಿದೆ. ಅರ್ಜಿ ಸಲ್ಲಿಸಲು ಏಪ್ರಿಲ್ 4 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 080–25589459 ಅಥವಾ ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜ್, ಡೆಹರಾಡೂನ್ ವೆಬ್ ಸೈಟ್ www.rimc.gov.in ನ್ನು ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಉಪ ನಿರ್ದೇಶಕರು ತಿಳಿಸಿದ್ದಾರೆ.

## ಶಂಕರಮಠದಲ್ಲಿ ಉಚಿತ ನೇತ್ರ ತಪಾಸಣೆ

• ಪ್ರಜೋದಯ ವರದಿ

**ಹಾಸನ:** ನಗರದ ಶೃಂಗೇರಿ ಶ್ರೀ ಶಂಕರಮಠದಲ್ಲಿ ಮಾ.24 ರಂದು ಶೃಂಗೇರಿ ಶಾರದಾಪೀಠಾಧೀಶ್ವರ ಜಗದ್ಗುರು ಶ್ರೀ ಭಾರತೀತೀರ್ಥರ 76ನೇ ವರ್ಧಂತಿ ನಿಮಿತ್ತ ಉಚಿತ ನೇತ್ರ ತಪಾಸಣೆ ನಡೆಯಲಿದ್ದು, ಅವಶ್ಯಕತೆ ಇರುವವರಿಗೆ ಮಾ.25ರಂದು ಬುಧವಾರ ಬೆಂಗಳೂರಿನ ಸುಸಜ್ಜಿತ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯನ್ನೂ ನಡೆಸಲಾಗುವುದು.

ಶೃಂಗೇರಿ ಶಂಕರಮಠದ ಅಧೀನ ಸಂಸ್ಥೆ ಬೆಂಗಳೂರಿನ ಶ್ರೀ ಶಾರದಾ ಕಣ್ಣು ಮತ್ತು ದಂತ ಚಿಕಿತ್ಸಾಲಯದ ತಜ್ಞ ವೈದ್ಯರು ಪ್ರಾಥಮಿಕ ತಪಾಸಣೆ ನಡೆಸಿ ಆಯ್ಕೆ ಮಾಡಿದವರನ್ನು ಮಂಗಳವಾರ ಸಂಜೆ ಬೆಂಗಳೂರಿಗೆ ಕರೆದೊಯ್ಯುವರು. ಶಸ್ತ್ರಚಿಕಿತ್ಸೆ ನಂತರ ಹಾಸನಕ್ಕೆ ಕರೆತರಲಾಗುವುದು. ಪ್ರಯಾಣ ಸೌಕರ್ಯ, ಊಟ, ವಸತಿ, ಶಸ್ತ್ರಚಿಕಿತ್ಸೆ, ಔಷಧ, ಕನ್ನಡಕ ಯಾವುದಕ್ಕೂ ಶುಲ್ಕವಿರುವುದಿಲ್ಲ.

ಈ ಬಾರಿ ವಿಶೇಷವಾಗಿ ಸಕ್ಕರೆ ಕಾಯಿಲೆ ಇರುವವರಿಗೆ ರೆಟಿನಾ ಸ್ಪೆಷಲಿಸ್ಟ್ ಡಾ. ಕವಿತಾರಾವ್ ರೆಟಿನಾ ಮತ್ತು ಅಕ್ಷಿಪಟಲ ಪರೀಕ್ಷೆ ನಡೆಸುತ್ತಾರೆ. ಓ.ಸಿ.ಟಿ., ಪಿ.ಆರ್.ಪಿ. ಲೇಸರ್ ಹಾಗೂ ಕಣ್ಣಿನ ಇಂಜೆಕ್ಷನ್ ಅವಶ್ಯಕತೆಯಿದ್ದವರಿಗೆ ರಿಯಾಯತಿ ದರದಲ್ಲಿ ಚಿಕಿತ್ಸೆ ನೀಡಲಾಗುವುದು. ಶಸ್ತ್ರಚಿಕಿತ್ಸೆ ಅವಶ್ಯವಿಲ್ಲದ, ಆದರೆ ತಾತ್ಕಾಲಿಕವಾಗಿ ಔಷಧಿ ಬಳಸಬೇಕಾದವರಿಗೂ ಸಹ ವೈದ್ಯರು ಸೂಚಿಸುವ ಅರ್ಹರಿಗೆ ಮಾತ್ರ ಔಷಧಿ ಪಡೆಯಲು ವ್ಯವಸ್ಥೆ ಮಾಡಲಾಗುವುದು.

24 ರಂದು ಬೆಳಿಗ್ಗೆ 10.30ರಿಂದ 2.30 ರವರೆಗೆ ಮಾತ್ರ ತಪಾಸಣೆ ಇರುತ್ತದೆ. ಸಕ್ಕರೆ ಕಾಯಿಲೆ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆ ಇರುವವರು ತಾವು ತೆಗೆದುಕೊಳ್ಳುತ್ತಿರುವ ಔಷಧಿಗಳನ್ನು ತಂದು ತೋರಿಸಬೇಕು. ಶಸ್ತ್ರಚಿಕಿತ್ಸೆಗೆ ಒಳಗಾಗುವವರು ತಮ್ಮ ಮೊಬೈಲ್, ಆಧಾರ್ ಕಾರ್ಡ್ ತರಬೇಕು. ಶಿಬಿರಕ್ಕೆ ಬರುವವರು ಸ್ನಾನ ಮಾಡಿ, ಶುಭ್ರವಾದ ಬಟ್ಟೆಯನ್ನು ಧರಿಸಿ ಬರಬೇಕು.

ಸಂಜೆ 5.30ಕ್ಕೆ ಖ್ಯಾತ ಬರೆಹಗಾರ, ಸಾಹಿತಿ ಡಾ. ಬಾಬುಕೃಷ್ಣಮೂರ್ತಿ ಅವರು 'ಶ್ರೀ ಶಂಕರರ ಜ್ಞಾನದ ಬೆಳಕು ಪಸರಿಸಿದ ಶ್ರೀಭಾರತೀ ತೀರ್ಥರು' ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ.

ಮಾಹಿತಿಗಾಗಿ 9844003434, 98446 41800 ಸಂಪರ್ಕಿಸಬಹುದು.



• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದಲ್ಲಿ ಯುಗಾದಿ ಹಬ್ಬವನ್ನು ಜನರು ಸಡಗರ ಸಂಭ್ರಮಗಳಿಂದ ಆಚರಿಸಿದರು. ದೇವಾಲಯಗಳಿಗೆ ಭೇಟಿ ನೀಡಿ ಪೂಜೆಸಲ್ಲಿಸಿ ಬೇವು, ಬೆಲ್ಲ ಸವಿದರು.

ಕೋಟೆಯ ಐತಿಹಾಸಿಕ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದಲ್ಲಿ ಬೆಳಿಗ್ಗೆ ದೇವರಿಗೆ ಪಂಚಾಮೃತ ಅಭಿಷೇಕ ನಡೆಸಿ ಪೂಜೆ ನೆರವೇರಿಸಲಾಯಿತು. ಸಂಜೆ ಪುರೋಹಿತ ಎಚ್.ಆರ್.ನರಸಿಂಹಮೂರ್ತಿ ಪಂಚಾಂಗ ಶ್ರವಣ ನಡೆಸಿ ಯುಗಾದಿ ಫಲಗಳನ್ನು ಹೇಳಿದರು.

ಕೋದಂಡರಾಮ ಸ್ವಾಮಿ ದೇವಾಲಯದಲ್ಲಿ ರಾಮೋತ್ಸವ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಯಿತು. ಬೆಳಿಗ್ಗೆ ದೇವಾಲಯದಲ್ಲಿ ಪಂಚಾಮೃತ ಅಭಿಷೇಕ ಹಾಗೂ ಪೂಜಾ ಕಾರ್ಯಗಳು ನಡೆದವು. ರಾತ್ರಿ ಕೋದಂಡರಾಮ ಭಜನಾ ಮಂಡಳಿಯವರಿಂದ ಸಾಮೂಹಿಕ ಭಜನೆ ನಡೆಯಿತು.

ಯುಗಾದಿ ಹಬ್ಬದ ಪ್ರಯುಕ್ತ ಗ್ರಾಮ ದೇವತೆಯಾದ ದೊಡ್ಡಮ್ಮ ದೇವಾಲಯದಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

ಗ್ರಾಮೀಣ ಭಾಗದಲ್ಲಿ ಹಬ್ಬದ ಆಚರಣೆ ಬಳಿಕ ಕೃಷಿಕರು ತಮ್ಮ ಜಮೀನುಗಳಲ್ಲಿ ಹೊನ್ನಾರು ಕಟ್ಟಿ ಉಳುಮೆ ನಡೆಸುವ ಮೂಲಕ ಕೃಷಿ ಕಾರ್ಯಕ್ಕೆ ಚಾಲನೆ ನೀಡಿದರು.

### ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಾಡಬೇಕಾದ ಉತ್ತಮ ಕೆಲಸಗಳಿವೆ

## ವರ್ಗಾವಣೆಯಲ್ಲಿ ಸಿಎಂ ಕಚೇರಿ ಹಸ್ತಕ್ಷೇಪ: 'ಹೈ' ಗರಂ

• ಪ್ರಜೋದಯ ವರದಿ



**ಬೆಂಗಳೂರು** ರಾಜ್ಯ ಸರ್ಕಾರಿ ನೌಕರರ ವರ್ಗಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಸ್ತಕ್ಷೇಪ ಮಾಡುತ್ತಿರುವುದನ್ನು ಹೈಕೋರ್ಟ್ ಗಂಭೀರವಾಗಿ ಪ್ರಶ್ನೆ ಮಾಡಿದೆ.

ಸಿಎಂ ಕಚೇರಿಯಿಂದ ವರ್ಗಾವಣೆ ವಿಚಾರವಾಗಿ ಬೆಸ್ಕಾಂನ ಸಹಾಯಕ ಅಭಿಯಂತರ (ಎಇ) ಚೇತನ್ ಎಸ್ ಎಂಬುವವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ನ್ಯಾಯಮೂರ್ತಿಗಳಾದ ಡಿ.ಕೆ.ಸಿಂಗ್ ಹಾಗೂ ಟಿ.ಎಂ.ನದಾಫ್ ಅವರಿದ್ದ ದ್ವಿಸದಸ್ಯ ಪೀಠವು ಗ್ರೂಪ್ ಬಿ ಅಥವಾ ಸಿ ಉದ್ಯೋಗಿಗಳ ವರ್ಗಾವಣೆ ವಿಚಾರದಲ್ಲಿ ಅಸಮಾಧಾನ ಹೊರಹಾಕಿದೆ.

ಸಿಎಂ ಸಿದ್ದರಾಮಯ್ಯಗೆ ನೌಕರರ ವರ್ಗಾವಣೆಗಿಂತ ಮಾಡಬೇಕಾದ ಉತ್ತಮ ಕೆಲಸಗಳಿವೆ. ಸರ್ಕಾರಿ ನೌಕರರ ವರ್ಗಾವಣೆ ವಿಚಾರ ಆಯಾ ಇಲಾಖೆಗೇ ಬಿಡಬೇಕು. ಮುಖ್ಯಮಂತ್ರಿಗಳ ಕಚೇರಿ ವರ್ಗಾವಣೆಯ ಮನವಿ ಸ್ವೀಕರಿಸಬಾರದು ಎಂದು ತರಾಟೆಗೆ ತೆಗೆದುಕೊಂಡಿದ್ದು, ಹೈಕೋರ್ಟ್‌ನ ಈ ಆದೇಶದ ಪ್ರತಿಯನ್ನು ಮುಖ್ಯಮಂತ್ರಿಗೆ ಕಳುಹಿಸಲು ಸೂಚಿಸಿದೆ.

ಪ್ರಕರಣ ಸಂಬಂಧ ಸಿಎಂ ನೀಡುವ ವರ್ಗಾವಣೆ ಶಿಫಾರಸುಗಳ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯಿಂದಲೂ ನಿಲುವು ಕೇಳಲಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಕಾರ್ಯದರ್ಶಿ, ಸಿಎಂ ಕಚೇರಿಯಿಂದ ನೀಡುವ ಟಿಪ್ಪಣಿಗಳು ಕೇವಲ ಶಿಫಾರಸುಗಳಾಗಿದ್ದು, ಅಂತಿಮ ಆದೇಶವನ್ನು ಸಂಬಂಧಪಟ್ಟ ಇಲಾಖೆ ನೀಡುತ್ತದೆ ಎಂದು ಸ್ಪಷ್ಟಪಡಿಸಿದ್ದರು. ಇಂಧನ ಇಲಾಖೆಯ ಕೆಲವು ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಸಿಎಂ ಕಚೇರಿ ಮುಂದಾಗಿತ್ತು.

ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಂಧನ ಇಲಾಖೆ ಆಡಳಿತದಲ್ಲಿ ತೀವ್ರ ಹಸ್ತಕ್ಷೇಪ ಮಾಡುತ್ತಿದ್ದರು. ಇದರಿಂದ ಅಸಮಾಧಾನಗೊಂಡ ಸಚಿವ ಕೆ.ಜೆ.ಜಾರ್ಜ್ ಸಿಎಂ ನಿವಾಸಕ್ಕೆ ತೆರಳಿ ಪ್ರಶ್ನಿಸಿದ್ದರು. ಅಲ್ಲದೇ ರಾಜೀನಾಮೆ ಬಗ್ಗೆ ಸಹ ಪ್ರಸ್ತಾಪಿಸಿದ್ದರು. ಆದರೆ ಸಿಎಂ ಸಿದ್ದರಾಮಯ್ಯ ಜಾರ್ಜ್ ಅವರನ್ನು ಸಮಾಧಾನಪಡಿಸಿದ್ದರು. ಇದು ರಾಜ್ಯ ರಾಜಕಾರಣದಲ್ಲಿ ಸಂಚಲನಕ್ಕೆ ಕಾರಣವಾಗಿತ್ತು.

ಹೀಗೆ ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಎಲ್ಲಾ ಇಲಾಖೆಗಳಲ್ಲೂ ಮೂಗು ತೂರಿಸುತ್ತಾರೆ ಎನ್ನುವ ಆರೋಪಗಳು ಕೇಳಿಬರುತ್ತಿವೆ. ಮತ್ತೊಂದೆಡೆ, ಇಂಧನ ಇಲಾಖೆಯ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿಯೂ ಸಿಎಂ ಕಚೇರಿ ಪಾತ್ರ ವಹಿಸಿದ್ದ ಕುರಿತು ರಾಜಕೀಯ ವಲಯ ದಲ್ಲಿ ಚರ್ಚೆಗಳು ನಡೆದಿವೆ.ಸಿಎಂ ಪುತ್ರ ಯತೀಂದ್ರ ಸಿದ್ದರಾಮಯ್ಯ ಇಲಾಖೆಗಳ ಕಾರ್ಯಚಟುವಟಿಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿವೆ.

ಈ ಎಲ್ಲಾ ಬೆಳವಣಿಗೆಗಳ ನಡುವೆ ಹೈಕೋರ್ಟ್ ನೀಡಿದ ಈ ತೀಕ್ಷ್ಣ ಸೂಚನೆ ರಾಜ್ಯ ರಾಜಕೀಯದಲ್ಲಿ ಮತ್ತಷ್ಟು ಚರ್ಚೆಗೆ ಕಾರಣವಾಗಿದೆ.



**ಹಾಸನ:** ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಈಚೆಗೆ ಶೈಕ್ಷಣಿಕ ಅಧ್ಯಯನದ ಭಾಗವಾಗಿ ನಗರದ ಹೊರ ವಲಯದ ಚೈತನ್ಯ ವೃದ್ಧಾಶ್ರಮಕ್ಕೆ ವಿದ್ಯಾರ್ಥಿನಿಯರು ಭೇಟಿ ನೀಡಿದ್ದರು.
ವೃದ್ಧಾಶ್ರಮದಲ್ಲಿರುವ ಹಿರಿಯ ಸದಸ್ಯರೊಂದಿಗೆ ಸಂವಾದ ನಡೆಸಿದ ಮಕ್ಕಳು, ಆಶ್ರಮದಲ್ಲಿರುವ ಹಿರಿಯರೊಂದಿಗೆ ಅವರ ಸ್ವ ವಿವರದ ಬಗ್ಗೆ ಮಾಹಿತಿ ಪಡೆದುಕೊಂಡರು. ನಂತರ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅನುಕೂಲಕ್ಕಾಗಿ ಹಲವು ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು.
ಕಾಲೇಜಿನ ಅಧ್ಯಾಪಕ ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಆಶ್ರಮಕ್ಕೆ ಭೇಟಿ ನೀಡಿದ್ದರು. ಸಿಬ್ಬಂದಿ ವರ್ಗ ಹಾಜರಿದ್ದರು.

## 35 ದಿನ ಮಂಗಳೂರು -ಸುಬ್ರಹ್ಮಣ್ಯ ಪ್ಯಾಸೆಂಜರ್ ರೈಲು ಸೇವೆ ಸ್ಥಗಿತ

• ಪ್ರಜೋದಯ ವರದಿ

**ಬೆಂಗಳೂರು:** ತುರ್ತು ರೈಲ್ವೆ ಹಳಿ ಕಾಮಗಾರಿ ಕಾರಣ ಮಂಗಳೂರು ಮತ್ತು ಸುಬ್ರಹ್ಮಣ್ಯ ನಡುವೆ ಸಂಚರಿಸುವ ಪ್ಯಾಸೆಂಜರ್ ರೈಲುಗಳ ಸೇವೆಯನ್ನು 35 ದಿನಗಳ ಕಾಲ ರದ್ದುಗೊಳಿಸಲಾಗಿದೆ.

ರೈಲು ಸಂಖ್ಯೆ 56629 (ಮಂಗಳೂರು-ಸುಬ್ರಹ್ಮಣ್ಯ ರೋಡ್ ಪ್ಯಾಸೆಂಜರ್) ಹಾಗು ರೈಲು ಸಂಖ್ಯೆ 56630 (ಸುಬ್ರಹ್ಮಣ್ಯ ರೋಡ್ - ಮಂಗಳೂರು ಪ್ಯಾಸೆಂಜರ್) ರದ್ದಾಗಿದೆ. ಈ ರೈಲುಗಳನ್ನು ಮಾರ್ಚ್ 23ರಿಂದ ಏಪ್ರಿಲ್ 14ರವರೆಗೆ ಹಾಗು ಜೂನ್ 10 ರಿಂದ 21ರವರೆಗೆ ಒಟ್ಟು 35 ದಿನಗಳ ಕಾಲ ರದ್ದುಪಡಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

**ವಿಳಂಬವಾಗುವ ರೈಲುಗಳು**

ಯಶವಂತಪುರ-ಕಾರವಾರ (16515), ಯಶವಂತಪುರ - ಮಂಗಳೂರು (16575) ಮತ್ತು ಯಶವಂತಪುರ-ಮಂಗಳೂರು (16539) ಎಕ್ಸ್‌ಪ್ರೆಸ್ ರೈಲುಗಳು ಸುಮಾರು 20 ನಿಮಿಷಗಳ ಕಾಲ ತಡವಾಗಿ ಸಂಚರಿಸಲಿವೆ. ಮಂಗಳೂರು-ಸುಬ್ರಹ್ಮಣ್ಯ ಪ್ಯಾಸೆಂಜರ್ ರೈಲು (56229) ಏಪ್ರಿಲ್ 21 ರಿಂದ ಜೂನ್ 9 ರವರೆಗೆ ಸುಮಾರು 55 ನಿಮಿಷ ವಿಳಂಬವಾಗಲಿದೆ.

# ಮಧ್ಯ ಪ್ರಾಚ್ಯ ಯುದ್ಧ: ಈ ವರೆಗೆ 6 ಭಾರತೀಯರ ಸಾವು

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷದ ಮಧ್ಯೆ ಗಲ್ಫ್ ಪ್ರದೇಶದಾದ್ಯಂತ ನಡೆದ ಪ್ರತ್ಯೇಕ ದಾಳಿಗಳಲ್ಲಿ ಆರು ಭಾರತೀಯರು ಪ್ರಾಣ ಕಳೆದುಕೊಂಡಿದ್ದಾರೆ ಮತ್ತು ಒಬ್ಬರು ಕಾಣೆಯಾಗಿದ್ದಾರೆಂದು ವಿದೇಶಾಂಗ ಸಚಿವಾಲಯ ಶುಕ್ರವಾರ ತಿಳಿಸಿದೆ.

ಗಲ್ಫ್‌ನಲ್ಲಿ ಸಿಲುಕಿರುವ ಭಾರತೀಯರ ವಾಪಸಾತಿಗಾಗಿ ಸ್ಥಳೀಯ ಅಧಿಕಾರಿಗಳೊಂದಿಗೆ ನೆರವು ಮತ್ತು ಸಮನ್ವಯ ಸಾಧಿಸುತ್ತಿದ್ದೇವೆಂದು ಹೆಚ್ಚುವರಿ ಕಾರ್ಯದರ್ಶಿ (ಗಲ್ಫ್) ಅಸೀಮ್ ಆರ್. ಮಹಾಜನ್ ಅವರು ಹೇಳಿದ್ದಾರೆ.

ಮಾ.18 ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಒಬ್ಬ ಭಾರತೀಯ ಪ್ರಜೆ ಸಾವನ್ನಪ್ಪಿದ್ದು, ಅದರೊಂದಿಗೆ ಗಲ್ಫ್ ಪ್ರದೇಶದಲ್ಲಿ ಭಾರತೀಯ ಸಾವು-ನೋವುಗಳ ಸಂಖ್ಯೆ ಆರಕ್ಕೆ ಏರಿದೆ ಎಂದು ಅವರು ತಿಳಿಸಿದ್ದಾರೆ.

ಮಾ.18ರಂದು ನಡೆದ ಇತ್ತೀಚಿನ ಘಟನೆಗಳಿಂದಾಗಿ ರಿಯಾದ್‌ನಲ್ಲಿ ಭಾರತೀಯ ಪ್ರಜೆಯ ದುರಂತ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಮೃತರ ಕುಟುಂಬ ಹಾಗು ಸ್ಥಳೀಯ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿರುವುದಾಗಿ ರಿಯಾದ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಾಮಾಜಿಕ ಮಾಧ್ಯಮ



ಪೋಸ್ಟ್‌ನಲ್ಲಿ ತಿಳಿಸಿದೆ. ಈ ವಿಷಯದಲ್ಲಿ ನಾವು ಸಾಧ್ಯವಿರುವ ಎಲ್ಲಾ ಸಹಾಯ ನೀಡಲು ಬದ್ಧರಾಗಿದ್ದೇವೆಂದು ಹೇಳಿದೆ.

ಗಲ್ಫ್ ಹೆಚ್ಚುವರಿ ಕಾರ್ಯದರ್ಶಿ ಅಸೀಮ್ ಆರ್.ಮಹಾಜನ್ ಅವರು ಮಾತನಾಡಿ, ಕಾಣೆಯಾದ ವ್ಯಕ್ತಿಯನ್ನು ಪತ್ತೆಹಚ್ಚಲು ಮತ್ತು ಮೃತ ದೇಹಗಳನ್ನು ಭಾರತಕ್ಕೆ ಹಿಂದಿರುಗಿಸಲು ಅನುಕೂಲವಾಗುವಂತೆ ಭಾರತ ಹಲವು ದೇಶಗಳ ರಾಜತಾಂತ್ರಿಕ ಅಧಿಕಾರಿಗಳೊಂದಿಗೆ ನಿಕಟವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ದುರದೃಷ್ಟವಶಾತ್ ಆರು ಭಾರ ತೀಯ ಪ್ರಜೆಗಳು ಪ್ರಾಣ ಕಳೆದು ಕೊಂಡಿದ್ದಾರೆ ಮತ್ತು ಒಬ್ಬರು ಕಾಣೆಯಾ ಗಿದ್ದಾರೆ. ಸೌದಿ ಅರೇಬಿಯಾ, ಓಮನ್, ಇರಾಕ್ ಮತ್ತು ಯುಎಇ ಯಲ್ಲಿರುವ ನಮ್ಮ ಕಾರ್ಯಾಚರಣೆಗಳು ಕಾಣೆಯಾದ ಭಾರತೀಯ ಪ್ರಜೆಯ ಬಗ್ಗೆ ಮತ್ತು ಮೃತ ಭಾರತೀಯ ಪ್ರಜೆಗಳ ಮೃತ ದೇಹಗಳನ್ನು ಭಾರತಕ್ಕೆ ಬೇಗ ವಾಪಾಸ್ ಕಳುಹಿಸುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿವೆಂದು ತಿಳಿಸಿದ್ದಾರೆ.

ಗಲ್ಫ್ ಪ್ರದೇಶದಿಂದ ಪ್ರಯಾಣ ಪರಿಸ್ಥಿತಿ ಕ್ರಮೇಣ ಸುಧಾರಿಸುತ್ತಿದೆ, ಗಮನಾರ್ಹ ಸಂಖ್ಯೆಯ ಪ್ರಯಾಣಿಕರು ಈಗಾಗಲೇ ಭಾರತಕ್ಕೆ ಮರಳುತ್ತಿದ್ದಾರೆಂದರು.

ಈ ಪ್ರದೇಶದಿಂದ ಹೆಚ್ಚುವರಿ ವಿಮಾನಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಪರಿಸ್ಥಿತಿ ಸುಧಾರಿಸುತ್ತಲೇ ಇದೆ. ಫೆ.28ರಿಂದ ಇಲ್ಲಿವರೆಗೆ ಸುಮಾರು 3,00,000 ಪ್ರಯಾಣಿಕರು ಈ ಪ್ರದೇಶದಿಂದ ಭಾರತಕ್ಕೆ ಮರಳಿದ್ದಾರೆಂದು ಅಧಿಕಾರಿ ತಿಳಿಸಿದ್ದಾರೆ.

### ನೆರೆ ದೇಶಗಳಿಂದ ತವರಿಗೆ ವಾಪಾಸ್

ಇರಾನ್‌ನಲ್ಲಿ ಸಿಲುಕಿರುವ ಹೆಚ್ಚಿನ ಭಾರತೀಯರು ನೆರೆಯ ದೇಶಗಳ ಭೂ ಮಾರ್ಗಗಳ ಮೂಲಕ ಸ್ವದೇಶಕ್ಕೆ ಮರಳಿದ್ದಾರೆ. ಭಾರತೀಯ ರಾಯಭಾರಿಗಳ ನೆರವಿನ ಮೂಲಕ ಸ್ಥಳಾಂತರ ಪ್ರಕ್ರಿಯೆ ಮುಂದುವರೆದಿದೆ ಎಂದು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಅಂತರ ಸಚಿವಾಲಯದ ಎಂಇಎ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅರ್ಮೇನಿಯಾ ಮತ್ತು ಅಜರ್ ಬೈಜಾನ್ ಮೂಲಕ ಇರಾನ್‌ನಿಂದ ನಿರ್ಗಮಿಸುವ ಭಾರತೀಯರ ಸಂಖ್ಯೆ ಹೆಚ್ಚಾಗಿದೆ. ಇರಾನ್‌ನಲ್ಲಿರುವ ಅನೇಕ ಭಾರತೀಯ ನಾಗರಿಕರು ಅರ್ಮೇನಿಯಾ ಮತ್ತು ಅಜರ್‌ಬೈಜಾನ್ ಮೂಲಕ ದೇಶಕ್ಕೆ ಮರಳುತ್ತಿದ್ದಾರೆ. ಅದರಲ್ಲಿ ಈಗ 913 ಭಾರತೀಯ ನಾಗರಿಕರು ಅರ್ಮೇನಿಯಾ ಮತ್ತು ಅಜರ್‌ಬೈಜಾನ್‌ನಲ್ಲಿ ಇರಾನ್‌ನಿಂದ ರಾಯಭಾರಿ ಕಚೇರಿಯ ಸಹಾಯದಿಂದ ಗಡಿ ದಾಟಿದ್ದಾರೆ ಎಂದರು.

ಇರಾನ್‌ನಲ್ಲಿ ಸಿಲುಕಿಕೊಂಡಿದ್ದ ಎಲ್ಲಾ ಭಾರತೀಯ ಯಾತ್ರಿಕರು ಈಗ ಸುರಕ್ಷಿತವಾಗಿ ಭಾರತಕ್ಕೆ ಮರಳಿದ್ದಾರೆ. ಈ ಹಿಂದೆ ಹೇಳಿದಂತೆ 284 ಯಾತ್ರಿಕರು ಅಲ್ಲಿ ಸಿಲುಕಿಕೊಂಡಿದ್ದರು. ಆ ಎಲ್ಲಾ 284 ಯಾತ್ರಿಕರು ಈಗ ಭಾರತಕ್ಕೆ ಮರಳಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಸಹಾಯವಾಣಿ ಕುರಿತು ಮಾಹಿತಿ ನೀಡಿದ ಅವರು, ಮಾಹಿತಿ ಮತ್ತು ಬೆಂಬಲ ಬಯಸುತ್ತಿರುವ ಜನರಿಂದ ಸೀಮಿತ ಸಂಖ್ಯೆಯ ಕರೆಗಳನ್ನು ಸ್ವೀಕರಿಸಿದೆ. ನಿನ್ನೆಯವರೆಗೂ ನಿಯಂತ್ರಣ ಕೊಠಡಿಗೆ ಒಟ್ಟು 10 ದೂರವಾಣಿ ಕರೆ ಮತ್ತು ಆರು ಇಮೇಲ್ ಬಂದಿವೆ. ಇವೆಲ್ಲವೂ ಹೆಚ್ಚಾಗಿ ವ್ಯಾಪಾರಿ ಹಡಗುಗಳಲ್ಲಿ ಸಿಲುಕಿರುವ ಭಾರ ತೀಯ ನಾಗರಿಕರ ಬಗ್ಗೆ ಮಾಹಿತಿ ಕೋರಿ ಬಂದ ಕರೆಗಳಾಗಿವೆ ಎಂದು ತಿಳಿಸಿದರು.

## 4 ಕೋ.ರೂ. ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಕ್ಯಾನಹಳ್ಳಿ, ಬ್ಯಾಕರವಳ್ಳಿ, ಹೆತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ 4 ಕೋ.ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸಿಮೆಂಟ್ ಮಂಜು ಅವರು ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಕ್ಯಾನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಹು ದಶಕಗಳ ಬೇಡಿಕೆಯಾಗಿದ್ದ ಆಲುವಳ್ಳಿ, ಕಡಗರವಳ್ಳಿ, ನೋದರಹಳ್ಳಿ ಹೊಸಗದ್ದೆ ಗ್ರಾಮಗಳಿಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಈ ರಸ್ತೆಯ 3 ಕೋ.ರೂ ವೆಚ್ಚದಲ್ಲಿ ನಿರ್ಮಾಣವಾಗಲಿದೆ.

ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಕೆರೆ ಮುಖ್ಯರಸ್ತೆಯಿಂದ ಬ್ಯಾಗದೀಣೆ ಗ್ರಾಮದವರೆಗೆ 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಸ್ಥಳೀಯ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಉಪಸ್ಥಿತ ರಿದ್ದರು.

ಇದೇ ವೇಳೆ ಬ್ಯಾಕರವಳ್ಳಿ ಗ್ರಾಮದ ಪರಿಮಿತಿಯಲ್ಲಿ ನಿರ್ಮಾಣವಾಗಲಿರುವ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ, ಗ್ರಾಮದಲ್ಲಿ ಆಗಬೇಕಿರುವ ಅಭಿವೃದ್ಧಿ ಕಾರ್ಯಗಳು ಮತ್ತು ಕುಂದು ಕೊರತೆಗಳ ಕುರಿತು ಶಾಸಕ ಸಿಮೆಂಟ್ ಮಂಜು ಅವರು ಸ್ಥಳೀಯರಿಂದ ಮಾಹಿತಿ ಪಡೆದುಕೊಂಡರು.

ಹೆತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆತ್ತೂರು ಬಿ ಬ್ಲಾಕ್ ನಿಂದ ಬಸವನಗುಡಿವರೆಗೆ 15 ಲ. ರೂ ವೆಚ್ಚದಲ್ಲಿ ನಿರ್ಮಾಣವಾಗಲಿರುವ ರಸ್ತೆ ನಿರ್ಮಾಣ ಕಾಮಗಾರಿಗೆ ಹಾಗು 32.5ಲಕ್ಷ ರೂ. ವೆಚ್ಚದಲ್ಲಿ ವಿದ್ಯಾನಗರದಿಂದ ಕರ್ನಾಟಕ ಪಬ್ಲಿಕ್



ಶಾಲೆಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಅದೇ ರೀತಿ 20 ಲ. ರೂ ವೆಚ್ಚದಲ್ಲಿ ಹೆತ್ತೂರು ಗ್ರಾಮ ಪಂಚಾಯಿತಿ ಹಾಡ್ಯ ಗ್ರಾಮದಿಂದ ರಾಮೇಶ್ವರ ದೇವಾಲಯದವರೆಗೆ ಸಂಪರ್ಕಿಸುವ ನೂತನ ರಸ್ತೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

## ಇಂದು ಕ್ರಿಯಾ ಯೋಗ ಧ್ಯಾನ ಪಾಠ ಕನ್ನಡ ಆವೃತ್ತಿ ಬಿಡುಗಡೆ

• ಪ್ರಜೋದಯ ವರದಿ

**ಹಾಸನ:** ಯೋಗದಾ ಸತ್ಸಂಗ ಸೊಸೈಟಿ ಆಫ್ ಇಂಡಿಯಾ ಪ್ರಕಟಿಸುವ ಗೃಹಾಧ್ಯಯನದ ಕ್ರಿಯಾ ಯೋಗ ಧ್ಯಾನ ಪಾಠ ಕನ್ನಡ ಆವೃತ್ತಿ ಬಿಡುಗಡೆ ಸಮಾರಂಭ ನಗರದ ಶಂಕರಿಪುರಂನ ಲ್ಲಿರುವ ಯೋಗದಾ ಸತ್ಸಂಗ ಕೇಂದ್ರದಲ್ಲಿ ಮಾ. 21ರ ಶನಿವಾರ ಸಂಜೆ 4 ಗಂಟೆಗೆ ನಡೆಯಲಿದೆ. ಸನ್ಯಾಸಿಗಳಾದ ಸ್ವಾಮಿ ಸ್ಮರಣಾನಂದ ಗಿರಿ, ಸ್ವಾಮಿ ಶ್ರೇಯಾನಂದ ಗಿರಿ ಅವರು ಪ್ರಮುಖ ಭಾಷಣ ಮಾಡಲಿದ್ದಾರೆ.

## ಮದ್ಯ ಮಾರಾಟ ತಡೆಗೆ ಅಧಿಕಾರಿಗಳೊಂದಿಗೆ ಸಭೆ



• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ರಾಜನ ಶಿರಿಯೂರಿನಲ್ಲಿ ಅಕ್ರಮ ಮದ್ಯ ಮಾರಾಟ ತಡೆಗೆ ಶಾಸಕ ಹೆಚ್.ಕೆ.ಸುರೇಶ್ ಅವರು, ಅಬಕಾರಿ ಇಲಾಖೆ ಅಧಿಕಾರಿಗಳು ಹಾಗು ಗ್ರಾಮಸ್ಥರರೊಂದಿಗೆ ಸಭೆ ನಡೆಸಿ ತಕ್ಷಣದಿಂದಲೇ ಅಕ್ರಮ ಮದ್ಯ ಮಾರಾಟ ತಡೆಗಟ್ಟುವುದಾಗಿ ಭರವಸೆ ನೀಡಿದರು.

ಗ್ರಾಮದಲ್ಲಿ ಅವ್ಯಾಹತವಾಗಿ ನಡೆಯುತ್ತಿದ್ದ ಅಕ್ರಮ ಮದ್ಯ ಮಾರಾಟದ ಬಗ್ಗೆ ಗ್ರಾಮಸ್ಥರು ಪ್ರತಿಭಟನೆ ನಡೆಸಿ, ಕ್ರಮ ಕೈಗೊಳ್ಳದ ಪೊಲೀಸ್ ಮತ್ತು ಅಬಕಾರಿ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದರು.

ಪ್ರತಿಭಟನೆ ತೀವ್ರಸ್ವರೂಪ ಪಡೆದುಕೊಂಡ ಹಿನ್ನಲೆ ಶಾಸಕ ಹೆಚ್.ಕೆ. ಸುರೇಶ್ ಅವರು, ಗ್ರಾಮಸ್ಥರ ಸಮ್ಮುಖದಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ತಕ್ಷಣದಿಂದಲೇ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸೂಚನೆ ನೀಡಿದರು. ಈ ವೇಳೆ ಗ್ರಾಮದಲ್ಲಿನ ಸಾರ್ವಜನಿಕರ ಇನ್ನಿತರ ಅಹವಾಲು ಆಲಿಸಿ, ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಲಾಯಿತು.

## ಸಕಲೇಶಪುರ: ಮಸೀದಿಯಲ್ಲಿ ರಂಜಾನ್ ಆಚರಣೆ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣ ಹೊರತುಪಡಿಸಿ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ರಂಜಾನ್ ಮಾಸದ ಈದ್ ಉಲ್ ಫಿತರ್ ಹಬ್ಬವನ್ನು ಮುಸ್ಲಿಂ ಬಾಂಧವರು ಶ್ರದ್ಧಾ ಭಕ್ತಿಯಿಂದ ಆಚರಿಸಿದರು.

ತಾಲ್ಲೂಕಿನ ಹಾನುಬಾಳು, ಹೊಸೂರು, ಕಾಡುಮನೆ, ದೇಖ್ಲಾ, ಹಲಸುಲಿಗೆ, ಸುಂಡೇಕೆರೆ, ಕೊಳ್ಳಹಳ್ಳಿ, ಬಾಳ್ಳುಪೇಟೆ ಹಾಗು ಪಟ್ಟಣದ ಸುತ್ತಲಿನ ಹುಡುಗರಹಳ್ಳಿ, ಆಚಂಗಿ ಸೇರಿ ವಿವಿಧ ಗ್ರಾಮಗಳ ಜುಮ್ಮಾ ಮಸೀದಿಗಳಲ್ಲಿ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಹಬ್ಬ ಆಚರಿಸಿದರು. ಹಬ್ಬದ ಪ್ರಯುಕ್ತ ಬೆಳಿಗ್ಗೆ 9 ಗಂಟೆಗೆ ವಿಶೇಷ ನಮಾಜ್ ಹಾಗು ಪ್ರಾರ್ಥನೆಗಳು ನೆರವೇರಿದವು.

ಪ್ರಾರ್ಥನೆಯ ನಂತರ ಮುಸ್ಲಿಂ ಬಾಂಧವರು ಪರಸ್ಪರ ಅಪ್ಪಿಕೊಂಡು ಈದ್ ಮುಬಾರಕ್ ಶುಭಾಶಯ ವಿನಿಮಯ ಮಾಡಿಕೊಂಡರು. ಹಬ್ಬದ ಪ್ರಯುಕ್ತ ಮನೆಗಳಲ್ಲಿ ವಿಶೇಷ ತಿನಿಸುಗಳನ್ನು ತಯಾರಿಸಿ ಕುಟುಂಬದವರೊಂದಿಗೆ ಹಬ್ಬದ ಸಂಭ್ರಮ ಹಂಚಿಕೊಂಡರು.

ಈದ್ ಉಲ್ ಫಿತರ್ ರಂಜಾನ್ ಉಪವಾಸ ಮಾಸದ ಸಮಾಪ್ತಿಯ ಹಬ್ಬವಾಗಿದ್ದು, ಒಂದು ತಿಂಗಳ ಉಪವಾಸ ಆತ್ಮಶುದ್ಧಿಯ ನಂತರ ಆಚರಿಸಲಾಗುತ್ತದೆ. ದಾನ ಧರ್ಮ, ಸಹಾನುಭೂತಿ ಮತ್ತು ಸಮಾನತೆ ಎಂಬ ಮೌಲ್ಯಗಳನ್ನು ಸಾರುವ ಈ ಹಬ್ಬದಲ್ಲಿ ಜಕಾತ್ ಮತ್ತು ಫಿತ್ರಾ ನೀಡು ವುದು ವಿಶೇಷ. ಬಡವರಿಗೂ ಹಬ್ಬದ ಸಂತೋಷ ತಲುಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಹಬ್ಬದ ಹಿನ್ನಲೆಯಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ವತಿಯಿಂದ ವಿವಿಧ ಪ್ರದೇಶಗಳಲ್ಲಿ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.



## ಕೆರೆ ಏರಿ ದುರಸ್ತಿ ಕಾಮಗಾರಿ ಪ್ರಾರಂಭ



• ಪ್ರಜೋದಯ ವರದಿ

**ಕೊಣನೂರು:** ಕುಸಿದಿದ್ದ ಕೆರೆ ಏರಿಯ ದುರಸ್ತಿ ಕಾಮಗಾರಿ ಭರದಿಂದ ಸಾಗುತ್ತಿದೆ. ಒಂದೂವರೆ ವರ್ಷದಿಂದ ಇಲ್ಲಿನ ದೊಡ್ಡ ಕೆರೆಯ ಏರಿಯ ಮೇಲಿನ ರಸ್ತೆಯಲ್ಲಿ ಮಣ್ಣು ಕುಸಿದು, ರಸ್ತೆ ಸಂಚಾರ ಹಾಗು ಕೆರೆಯಲ್ಲಿ ನೀರು ಸಂಗ್ರಹಣೆಗೂ ತೊಡಕುಂಟಾಗಿತ್ತು. ಈ ಕೆರೆಗೆ ಹಾರಂಗಿ ಮತ್ತು ಹೇಮಾವತಿ ನಾಲೆಗಳ ನೀರು ಹರಿಯುವುದರಿಂದ ಹೆಚ್ಚಿನ ಪ್ರಮಾಣದ ನೀರು ಸಂಗ್ರಹವಾಗಿ ಏರಿಯ ಮೇಲೆ ಒತ್ತಡ ಹೆಚ್ಚಾಗುತ್ತಿತ್ತು. ಇದನ್ನು ಕಡಿಮೆ ಮಾಡಲು ಕೆರೆಯ ತೂಬನ್ನು ಒಡೆದು, ಹೆಚ್ಚುವರಿ ನೀರು ಸಂಗ್ರಹವಾಗದಂತೆ ಕ್ರಮ ಕೈಗೊಳ್ಳಲಾಗಿತ್ತು.

ಈಗ ಕೆರೆ ಏರಿಯನ್ನು ದುರಸ್ತಿಗೊಳಿಸಿ ರಸ್ತೆ ನಿರ್ಮಿಸುವ ಕಾಮಗಾರಿಯನ್ನು ಕಾವೇರಿ ನೀರಾವರಿ ನಿಗಮದ ವತಿಯಿಂದ 1.88 ಕೋ.ರೂ. ವೆಚ್ಚದಲ್ಲಿ ಕೈಗೊಳ್ಳಲಾಗಿದೆ. ರಸ್ತೆಯು ಕುಸಿದಿದ್ದ ಸ್ಥಳದಲ್ಲಿ ಸುಮಾರು 150 ಮೀಟರ್ ಉದ್ದಕ್ಕೂ ರಸ್ತೆ ನಿರ್ಮಾಣಕ್ಕಾಗಿ ಹಾಕಿದ್ದ ಮಣ್ಣನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ.

ಕಾಮಗಾರಿ ಸ್ಥಳದಲ್ಲಿ ಜೇಡಿ ಮಣ್ಣು ಹೆಚ್ಚಿನ ಪ್ರಮಾಣದಲ್ಲಿ ದೊರೆಯುತ್ತಿರುವುದರಿಂದ, ತಮ್ಮ ಜಮೀನಿಗೆ ಬಳಸಿಕೊಳ್ಳಲು ರೈತರು ಸಾಲುಗಟ್ಟಿ ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ಸಾಗಿಸುತ್ತಿದ್ದಾರೆ. ಈ ರಸ್ತೆ ಕೊಡಗು ಹಾಗೂ ಕೊಣನೂರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ಮಾರ್ಗವಾಗಿರುವುದರಿಂದ, ಕಾಮಗಾರಿ ಗುಣಮಟ್ಟದಿಂದ ನಡೆಯಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ದೇವಸ್ಥಾನದಲ್ಲಿ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಬೇಲೂರು:** ದೇವಸ್ಥಾನ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ದೇವರ ಮೂರ್ತಿಗೆ ಹಾಕಿದ್ದ ಚಿನ್ನ ಹಾಗು ಬೆಳ್ಳಿ ಆಭರಣ ಕದ್ದಿರುವ ಘಟನೆ ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ದೇವಿರಮ್ಮ ದೇವಸ್ಥಾನಕ್ಕೆ ಮಾ.18ರ ರಾತ್ರಿ ನುಗ್ಗಿರುವ ಕಳ್ಳರು ಗರ್ಭಗುಡಿಯಲ್ಲಿದ್ದ 500 ಗ್ರಾಂ ತೂಕದ ಬೆಳ್ಳಿ ಬಟ್ಟಲು, ದೇವರ ಕೊರಳಿಗೆ ಹಾಕಿದ್ದ 4 ಗ್ರಾಂ ಚಿನ್ನದ ತಾಳಿ ಕಳವು ಮಾಡಿದ್ದಾರೆ. ಬೇಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ

» ಮೊದಲನೇ ಪುಟದಿಂದ

ತನ್ನ ವಿದೇಶಿ ವಿನಿಮಯ ಮೀಸಲು ನಿಧಿಯಿಂದ ಡಾಲರ್‌ಗಳನ್ನು ಮಾರಾಟ ಮಾಡುವ ಸಾಧ್ಯತೆ ಇದೆ.

ರೂಪಾಯಿ ಮೌಲ್ಯ ಕುಸಿತದಿಂದ ಸಾರಿಗೆ ವೆಚ್ಚ ಏರುವುದರಿಂದ ತರಕಾರಿ, ಬೇಳೆಕಾಳು ಸೇರಿ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಾಗಿ ಸಾಮಾನ್ಯ ಜನರ ಬಜೆಟ್ ಏರು ಪೇರಾಗುತ್ತದೆ. ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳುವ ಉತ್ಪಾದನಾ ವಲಯದ ಕಂಪನಿಗಳ ಲಾಭ ಕಡಿಮೆಯಾ ಗುತ್ತದೆ. ವಿದೇಶಿ ಬ್ಯಾಂಕ್‌ಗಳಿಂದ ಸಾಲ ಪಡೆದ ಕಂಪನಿಗಳಿಗೆ ಬಡ್ಡಿ ಪಾವತಿಸುವುದು ದುಬಾರಿಯಾಗುತ್ತದೆ.

ಕಚ್ಚಾ ತೈಲ ಬೆಲೆಯಲ್ಲಿ ಪ್ರತಿ 10 ಡಾಲರ್ ಏರಿಕೆಯಾದಾಗ, ಹಣದುಬ್ಬರ ದರದಲ್ಲಿ ಶೇ.0.50 ರಷ್ಟು ಹೆಚ್ಚಳವಾಗುತ್ತದೆ. ಮುಂದಿನ ಆರ್ಥಿಕ ವರ್ಷದ ಹಣದುಬ್ಬರ ದರವನ್ನು ಈ ಹಿಂದೆ ಶೇ.3.8ರಷ್ಟು ಎಂದು ಅಂದಾಜಿಸಲಾಗಿತ್ತು. ಆದರೆ ಈಗ ಅದು ಶೇ.4.5 ಕ್ಕೆ ಏರುವ ಸಾಧ್ಯತೆಯಿದೆ ಎಂದು ನೊಮುರಾ ಸಂಸ್ಥೆಯ ಆರ್ಥಿಕ ತಜ್ಞೆ ಸೋನಲ್ ವರ್ಮಾ ಹೇಳಿದ್ದಾರೆ.

## ಅಪಘಾತ: ಬೈಕ್ ಹಿಂಬದಿ ಸವಾರ ಸಾವು

• ಪ್ರಜೋದಯ ವರದಿ

**ಹೊಳೆನರಸೀಪುರ:** ರಸ್ತೆಗೆ ಅಡ್ಡಲಾಗಿ ನಾಯಿ ಬಂದಿದ್ದರಿಂದ ಡಿಕ್ಕಿಯಾಗುವುದನ್ನು ತಪ್ಪಿಸಲು ಜೋರಾಗಿ ಬ್ರೇಕ್ ಹಾಕಿದ ಪರಿಣಾಮ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಬೈಕ್ ಹಿಂಬದಿ ಸವಾರ ಮೃತಪಟ್ಟು ಮತ್ತೊಬ್ಬ ಗಾಯ ಗೊಂಡಿರುವ ಘಟನೆ ತಾಲ್ಲೂಕಿನ ಹಾಸನ-ಮೈಸೂರು ರಸ್ತೆಯ ಕರ್ನಾಟಕ ಬ್ಯಾಂಕ್ ಸಮೀಪ ನಡೆದಿದೆ.

ಪೂಜೆಕೊಪ್ಪಲು ಗ್ರಾಮದ ಸಂದೀಪ ಮೃತ ದುರ್ದೈವಿ. ಸ್ನೇಹಿತ ರಾಘು ಜೊತೆಗೆ ಗುರುವಾರ ಬಾಗಿವಾಳು ಗ್ರಾಮದ ಬಿಂದಿಗೆ ಜಾತ್ರೆಗೆ ತೆರಳಿದ್ದ ಅವರು ರಾತ್ರಿ 11ರ ಸಮಯದಲ್ಲಿ ಮನೆಗೆ ವಾಪಾಸ್ಸಾಗುತ್ತಿದ್ದಾಗ ಅವಘಡ ಸಂಭವಿಸಿದೆ.

ರಸ್ತೆಗೆ ಏಕಾಏಕಿ ನಾಯಿ ಅಡ್ಡ ಬಂದಿದ್ದರಿಂದ ಸವಾರ ರಾಘು ಬ್ರೇಕ್ ಹಾಕಿದ್ದರಿಂದ ನಿಯಂತ್ರಣ ತಪ್ಪಿ ರಸ್ತೆ ಮಧ್ಯೆದಲ್ಲಿರುವ ಡಿವೈಡರ್‌ಗೆ ಬೈಕ್ ಡಿಕ್ಕಿಯಾಗಿದೆ. ಸಂದೀಪ ರಸ್ತೆಗೆ ಹಾರಿ ಬಿದ್ದಿದ್ದರಿಂದ ಗಂಭೀರ ಗಾಯಗೊಂಡಿದ್ದರು. ಸವಾರ ರಾಘುಗೆ ಗಾಯಗಳಾಗಿವೆ. ಚಿಕಿತ್ಸೆಗಾಗಿ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಾನಸಿಕ-ದೈಹಿಕ ಸದೃಢತೆಗೆ ಕ್ರೀಡೆ ಸಹಕಾರಿ



• ಪ್ರಜೋದಯ ವರದಿ

**ಹಾಸನ:** ವ್ಯಕ್ತಿಯ ಮಾನಸಿಕ ಹಾಗು ದೈಹಿಕ ಸದೃಢತೆಗೆ ಕ್ರೀಡೆ ಸಹಕಾರಿಯಾಗಿದೆ ಎಂದು ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಹೆಚ್.ಎಸ್. ವೆಂಕಟೇಶ್ ಅವರು ಹೇಳಿದರು.

ಗುಡ್ ಸಿಟಿಜನ್ ಕಾಲೇಜು ವತಿಯಿಂದ ನಗರದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಜಿಸಿಸಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯು ಮಹತ್ವವಾಗಿರುತ್ತದೆ. ಕ್ರೀಡೆ ಯಿಂದ ದೈಹಿಕ ಹಾಗು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಬಲವನ್ನು ಇಂತಹ ಕ್ರೀಡಾಕೂಟಗಳು ಹೆಚ್ಚಿಸುತ್ತವೆ. ಪರಸ್ಪರ ಸ್ನೇಹ, ಬಾಂಧವ್ಯ ವೃದ್ಧಿಯೂ ಸಾಧ್ಯವಾಗುತ್ತದೆಂದರು.

ವಿದ್ಯಾರ್ಥಿಗಳು ಕೇವಲ ಪಠ್ಯ ಪುಸ್ತಕ ಅಧ್ಯಯನಕ್ಕಷ್ಟೇ ಸೀಮಿತರಾಗದೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಉಪನ್ಯಾಸಕರು ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಬೇಕೆಂದರು. ರಾಷ್ಟ್ರೀಯ ಅಥ್ಲೆಟಿಕ್ ಕ್ರೀಡಾಪಟು ಡಿ.ಜೆ.ಕಾವ್ಯ ಹಾಗು ಬಾಸ್ಕೆಟ್ ಬಾಲ್ ಪಟು ಪ್ರದೀಪ್ ಭಾಗವಹಿಸಿದ್ದರು. ಗುಡ್ ಸಿಟಿಜನ್ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಕಾಂತರಾಜು,ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಹೇಮಂತ್ ಕುಮಾರ್ ಹಾಜರಿದ್ದರು. ಚೇತನ್ ನಾಯಕತ್ವದ ಜಿಸಿಸಿಸ್ಟ್ರೈಕರ್ಸ್ ತಂಡ ಜಯ ಸಾಧಿಸಿತು.

## ನುಗ್ಗೇಹಳ್ಳಿ ಆಂಜನೇಯ ದೇಗುಲದಲ್ಲಿ ಪೂಜೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮದ ಪುರಾಣ ಪ್ರಸಿದ್ಧ ಶ್ರೀ ಕಲ್ಯಾಣಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಯುಗಾದಿ ಪ್ರಯುಕ್ತ ವಿಶೇಷ ಪೂಜೆ, ಉತ್ಸವ ಹಾಗು ಅನ್ನ ಸಂತರ್ಪಣೆ ನಡೆಯಿತು.

ಯುಗಾದಿ ಅಮಾವಾಸ್ಯೆಯ ಪ್ರಯುಕ್ತ ದೇವಾಲಯದಲ್ಲಿ ಬೆಳಿಗ್ಗೆಯಿಂದ ಅಭಿಷೇಕ, ಪೂಜೆ ಹಾಗು ಹೂವಿನ ಅಲಂಕಾರ ಸೇರಿ ವಿವಿಧ ಪೂಜೆಗಳು ನೆರವೇರಿದವು. ನೂರಾರು ಭಕ್ತರು ದೇವರ ದರ್ಶನ ಪಡೆದರು.

ಗ್ರಾಮದ ರಾಜ ಬೀದಿಗಳಲ್ಲಿ ಶ್ರೀ ಕಲ್ಯಾಣಿ ಆಂಜನೇಯಸ್ವಾಮಿ ಹಾಗು ಒಂಟೆ ಮೂರ್ತಿಯ ಉತ್ಸವ ಮಂಗಳವಾದ್ಯದೊಂದಿಗೆ ನೆರವೇರಿತು. ಜೊತೆಗೆ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ, ಶ್ರೀ ಸದಾಶಿವ ಸ್ವಾಮಿ, ನುಗ್ಗೇಹಳ್ಳಿ ಅಮ್ಮನವರ ದೇವಾಲಯ ಸೇರಿ ಜಂಬೂರು ಗ್ರಾಮದ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ಪೂಜೆ ನಡೆಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಪಾದಯಾತ್ರೆಗಳ ಸೇವಾ ಸಮಿತಿ ಅಧ್ಯಕ್ಷ ಹೋಟೆಲ್ ರಾಜಣ್ಣ, ದೇವಾಲಯದ ಮುಖ್ಯ ಅರ್ಚಕ ರವಿಶಾಚಾರ್, ಗ್ರಾಮಸ್ಥರಾದ ಎನ್.ಎಸ್.ಲಕ್ಷ್ಮಣ್, ಶಂಕರ್, ಲೋಕೇಶ್, ಅಶೋಕ್, ಸತೀಶ್ ಯಾದವ್, ಮಿಠಾಯಿ ಜಯಣ್ಣ, ಮಂಜು, ದೇವರಾಜ್, ಉಮೇಶ ಆಚಾರ್, ಶಿವಶಂಕರ್ ಇತರರಿದ್ದರು.



## ಸೌಮ್ಯ ಸ್ವಭಾವದಿಂದ ಎಲ್ಲರ ಮನಸ್ಸು ಗೆದ್ದ ಪುನೀತ್



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ನಟ ಪುನೀತ್ ರಾಜಕುಮಾರ್ ಅವರು ಸಿನಿಮಾ ನಟ ಮಾತ್ರವಲ್ಲದೆ ನಡೆ, ನುಡಿ ಹಾಗು ಸೌಮ್ಯ ಸ್ವಭಾವದ ವ್ಯಕ್ತಿತ್ವದ ಮೂಲಕ ಎಲ್ಲರ ಮನಸ್ಸು ಗೆದ್ದಿದ್ದರು ಎಂದು ಸಾಹಿತಿ ಡಾ.ಚಂದ್ರು ನಿಂಬೇಹಳ್ಳಿ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ಪುನೀತ್ ರಾಜಕುಮಾರ್ ಅಭಿಮಾನಿಗಳ ಬಳಗದಿಂದ ಹಮ್ಮಿಕೊಂಡಿದ್ದ ಡಾ.ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬದ ಆಚರಣೆಯಲ್ಲಿ ಮಾತನಾಡಿ, ಮನುಷ್ಯ ಬದುಕಿದ್ದಾಗ ಮಾಡಿದ ಸಮಾಜಮುಖಿ ಸೇವೆಯು ಕಾಲದ ನಂತರವೂ ಚಿರವಾಗಿ ಉಳಿಯಲಿದೆ ಎಂಬುದಕ್ಕೆ ಪುನೀತ್ ರಾಜಕುಮಾರ್ ಅವರ ಬದುಕು ಸಾಕ್ಷಿಯಾಗಿದೆ ಎಂದರು.

ಚನ್ನರಾಯಪಟ್ಟಣ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಎನ್.ಮಂಜುನಾಥ್ ಅವರು ಮಾತನಾಡಿ, ನಿಷ್ಠಾವಂತ ಜಿಲ್ಲಾಧಿಕಾರಿ (ಪೃಥ್ವಿ ಸಿನಿಮಾ), ದಕ್ಷ ಪೊಲೀಸ್ ಹಾಗು ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಾಂಸಾರಿಕ ಸಿನಿಮಾಗಳು ಸೇರಿ ಎಲ್ಲಾ ಮಾದರಿಯ ಪಾತ್ರಗಳನ್ನು ನಿರ್ವಹಿಸುವ ಮೂಲಕ ಸಮಾಜದ ಗಮನ ಸೆಳೆದ ಮಹಾನ್ ವ್ಯಕ್ತಿ ಪುನೀತ್ ಎಂದು ಶ್ಲಾಘಿಸಿದರು.

ಮಾನವ ಹಕ್ಕುಗಳ ತನಿಖಾ ಸಮಿತಿ ತಾಲ್ಲೂಕು ಕಾರ್ಯದರ್ಶಿ ಎಂ.ಜಿ.ನಂಜೇಗೌಡ ಅವರು ಮಾತನಾಡಿ, ಅಭಿಮಾನಿಗಳೇ ದೇವರು ಎನ್ನುವ ಮೂಲಕ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದ ವರನಟ ಡಾ.ರಾಜಕುಮಾರ್ ಅವರ ಪುತ್ರ ಪುನೀತ್ ರಾಜಕುಮಾರ್ ಅವರು ತಂದೆಯ ಹಾದಿಯಲ್ಲಿಯೇ ಸಾಗಿದರು. ಸಂಕಷ್ಟದಲ್ಲಿ ಇರುವವರಿಗೆ ನೆರವಾಗುವ ಮೂಲಕ ಸಮಾಜ ಸೇವೆಯಲ್ಲಿ ನಿರತರಾಗಿದ್ದರು. ಅವರ ಹೆಸರು ಸದಾಕಾಲ ಕನ್ನಡಿಗರ ಮನಸ್ಸಿನಲ್ಲಿ ಉಳಿಯಲಿದೆ ಎಂದರು.

ರೈತ ಸಂಘದ ಅಧ್ಯಕ್ಷ ಬಾಲಣ್ಣ, ಮಾನವ ಹಕ್ಕುಗಳ ತನಿಖಾ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಶಿಕ್ ಗೌಡ, ಪ್ರಗತಿ ವಾಸು, ಬ್ಯಾಂಗಲ್ ಮಹೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಿರಣ್, ಜಿ.ಪರಮೇಶ್ವರ ಯುವಕರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಮೌರ್ಯ ಇತರರಿದ್ದರು.

## ಯುಗಾದಿ: ಮಾಡಾಳು ಸ್ವರ್ಣ ಗೌರಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಮಾಡಾಳು:** ಗ್ರಾಮದ ಮೂಲಸ್ಥಾನ ಶ್ರೀ ಸ್ವರ್ಣ ಗೌರಮ್ಮದೇವಿ ದೇವಾಲಯದಲ್ಲಿ ಯುಗಾದಿ ಅಮಾವಾಸ್ಯೆ ವಿಶೇಷ ಪೂಜೆ ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ನೆರವೇರಿತು.

ಅರಸೀಕೆರೆ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಪುಣ್ಯಕ್ಷೇತ್ರ ಅಮ್ಮನವರ ದೇವಾಲಯದಲ್ಲಿ ಸಂಪ್ರದಾಯದಂತೆ ಲೋಕ ಕಲ್ಯಾಣಾರ್ಥ ಪ್ರತಿ ತಿಂಗಳು ದೇವಿಗೆ ಧಾರ್ಮಿಕ ವಿಧಿ ಕೈಂಕರ್ಯ ನೆರವೇರಿಸಲಾಗುತ್ತದೆ.

ಈ ಬಾರಿ ಯುಗಾದಿ ಹಬ್ಬ ಹಾಗು ಅಮಾವಾಸ್ಯೆ ನಿಮಿತ್ತ ಬಣ್ಣ ಬಣ್ಣದ ಹೂಗಳಿಂದ ವಿಶೇಷ ಅಲಂಕಾರ ಮಾಡಿದ್ದು ಕಣ್ಮನ ಸೆಳೆಯಿತು. ಮುಂಜಾನೆ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಯನ್ನು ಪುರೋಹಿತರು ಶಾಸ್ತ್ರೋಕ್ತವಾಗಿ ನಡೆಸಿಕೊಟ್ಟರು.

ಪೂಜೆಯ ಅಂಗವಾಗಿ ದೇವಾಲಯವನ್ನು ತಳಿರು ತೋರಣ, ಬಾಳೆ ಕಂದುಗಳಿಂದ ಸಿಂಗರಿಸ ಲಾಗಿತ್ತು. ದೇಗುಲವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ರಾತ್ರಿ 8 ಗಂಟೆಗೆ ಸರಿಯಾಗಿ ಪುರೋಹಿತರಿಂದ ಕೋಡಿ ಮಠ ಗದ್ದುಗೆಯಲ್ಲಿ ಯೋಗ ಸಮಾಧಿಯಲ್ಲಿರುವ ಮಹಾ



ತಪಸ್ವಿ ಶಿವಲಿಂಗ ಅಜ್ಜಯ್ಯ ಮೂರ್ತಿ ಹಾಗು ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸವೇಶ್ವರ ಸ್ವಾಮಿ ಮತ್ತು ಅಮ್ಮನವರಿಗೆ ಪೂಜೆ ಸಲ್ಲಿಸಿ ಮಹಾಮಂಗಳಾರತಿಯನ್ನು ಭಕ್ತಿ ಭಾವದಿಂದ ನೆರವೇರಿಸಲಾಯಿತು.

ಭಕ್ತಾಧಿಗಳಿಗೆ ಕಡಲಮಗೆ ಗ್ರಾಮಸ್ಥರು ದಾಸೋಹ ವ್ಯವಸ್ಥೆ ಕಲ್ಪಿಸಿದ್ದರು. ಮಾಡಾಳು ಗ್ರಾಮಸ್ಥರು ಸೇರಿ ಸೀತಾಪುರ ಕೊಪ್ಪಲು, ಯರೇಹಳ್ಳಿ, ಡಿ.ಎಂ.ಕುರ್ಕೆ, ಸಶಿವಾಳ, ರಾಂಪುರ, ಸೊಪ್ಪಿನಹಳ್ಳಿ, ದಿಬ್ಬೂರು, ವೈ.ಜಿ.ಹಳ್ಳಿ, ಪಿ.ಹೊಸಳ್ಳಿ, ಕಿತ್ತನಕೆರೆ ಗ್ರಾಮದ ಭಕ್ತರು ಭಾಗವಹಿಸಿದ್ದರು.

### ಪುಣ್ಯ ಕ್ಷೇತ್ರದ ಅಭಿವೃದ್ಧಿಗೆ ಒತ್ತು: ಶಾಸಕ ಸಿ.ಎನ್.ಬಾಲಕೃಷ್ಣ

# 35 ಲಕ್ಷ ರೂ. ವೆಚ್ಚದಲ್ಲಿ ತೇರು ಮನೆ, ಮಹಾನವಮಿ ಮಂಟಪ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನವಿಲೆ ನಾಗೇಶ್ವರ ಸ್ವಾಮಿ ತೇರು ಮನೆ ಹಾಗು ಮಹಾ ನವಮಿ ಮಂಟಪವನ್ನು 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ನವಿಲೆ ಗ್ರಾಮದಲ್ಲಿ ನೂತನ ರಥದ ಮನೆ ಹಾಗು ಮಹಾನವಮಿ ಮಂಟಪ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, 20 ಲಕ್ಷ ರೂ. ಗಳಲ್ಲಿ ತೇರು ಮನೆ, 15 ಲಕ್ಷ ರೂ. ವೆಚ್ಚದಲ್ಲಿ ಮಹಾನವಮಿ ಮಂಟಪ ನಿರ್ಮಾಣ ಮಾಡಲಾಗುತ್ತದೆ. ವೈಯಕ್ತಿಕವಾಗಿ 5 ಲಕ್ಷ ರೂ. ಅನುದಾನ ನೀಡುತ್ತೇನೆಂದು ಭರವಸೆ ನೀಡಿದರು.

ಭಕ್ತರ ಸಹಕಾರದಿಂದ 90 ಲಕ್ಷ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಗೊಂಡಿದೆ. ರಥದ ಮನೆ ಅವಶ್ಯಕತೆ ಇರುವ ಹಿನ್ನಲೆಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ನವಿಲೆ ನಾಗೇಶ್ವರ ಸ್ವಾಮಿ ಕ್ಷೇತ್ರಕ್ಕೆ ಬೆಂಗಳೂರು ಸೇರಿ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಬರುತ್ತಾರೆಂದರು.

ಅನ್ನ ದಾಸೋಹ, ಕಲ್ಯಾಣ ಮಂಟಪ, ಸಾರಿಗೆ ವ್ಯವಸ್ಥೆ, ಶೌಚಾಲಯ, ಕುಡಿಯುವ ನೀರು ಸೇರಿ ಮೂಲಸೌಕರ್ಯ ಕಲ್ಪಿಸಲಾಗಿದೆ. ಮುಂಬರುವ ದಿನಗಳಲ್ಲೂ ಪುಣ್ಯ ಕ್ಷೇತ್ರದ ಅಭಿವೃದ್ಧಿಗೆ ಒತ್ತು



ನೀಡಲಾಗುವುದು ಎಂದರು.

ಗ್ರಾಮದಲ್ಲಿ ವ್ಯವಸ್ಥಿತವಾಗಿ ರಥೋತ್ಸವ ನಡೆಸಲು ವಿದ್ಯುತ್ ಲೈನ್ ಸಮಸ್ಯೆಯಾಗುತ್ತಿರುವ ಬಗ್ಗೆ ಗ್ರಾಮಸ್ಥರು ಹೇಳಿಕೊಂಡಿದ್ದಾರೆ. ಈ ಬಗ್ಗೆ ಕ್ರಮ ವಹಿಸುವಂತೆ ನುಗ್ಗೇಹಳ್ಳಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನೀಯರ್‌ಗೆ ತಿಳಿಸಲಾಗಿದೆ. ಸದ್ಯದಲ್ಲೇ ವಿದ್ಯುತ್ ಲೈನ್ ಬದಲಾವಣೆಗೆ ಕ್ರಮ ವಹಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ಅವರು ಮಾತನಾಡಿ, ಗ್ರಾಮದ ನಾಗೇಶ್ವರ ಸ್ವಾಮಿ ದೇವಾಲಯ ಹೆಚ್ಚು ಪ್ರಸಿದ್ಧಿ ಹೊಂದಿದೆ. ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ಮಾದರಿಯಲ್ಲಿ ರಾಜ ಗೋಪುರ ನಿರ್ಮಾಣಕ್ಕೆ ಶಾಸಕರು ಸಹಕರಿಸಬೇಕು. ಕ್ಷೇತ್ರವನ್ನು ಪ್ರವಾಸಿ ತಾಣವಾಗಿ ರೂಪಿಸಬೇಕೆಂದು ಕೋರಿದರು.

ಉಪತಹಶೀಲ್ದಾರ್ ಮೋಹನ್, ರಥ ನಿರ್ಮಾಣ ಸಮಿತಿ ಅಧ್ಯಕ್ಷ ಸದಾಶಿವಯ್ಯ, ಕಾರ್ಯದರ್ಶಿ ಜಯದೇವಪ್ಪ, ಖಜಾಂಚಿ ಕುಮಾರಸ್ವಾಮಿ, ಅರ್ಚಕರಾದ ಅಭಿಷೇಕ್, ಪ್ರಸನ್ನ, ಮುಖಂಡರಾದ ಡಿ.ಕೆ. ದಿನೇಶ್, ಎನ್.ಡಿ.ಶಿವಕುಮಾರ್, ರಾಜು, ಹುಲಿಕೆರೆ ಸಂಪತ್ ಕುಮಾರ್ ಇತರರಿದ್ದರು.

## ಹಿಂದೂ ಸಂಪ್ರದಾಯದಲ್ಲಿ ಯುಗಾದಿಗೆ ಮಹತ್ವದ ಸ್ಥಾನ

• ಪ್ರಜೋದಯ ವರದಿ

**ಹಾಸನ:** ಜಗತ್ತು ಮತ್ತು ಮನಸ್ಸುಗಳ ಪರಿವರ್ತನೆಯ ಕಾಲವೇ ಯುಗಾದಿ. ಸನಾತನ ಧರ್ಮದಲ್ಲಿ ಯುಗಾದಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗಿದೆ ಎಂದು ಶ್ರೀ ಕ್ಷೇತ್ರ ಕಾಳಿಕಾಂಬ ಕಮಟೇಶ್ವರ ದೇವಾಲಯದ ಪ್ರಧಾನ ಅರ್ಚಕ ಎನ್.ಪ್ರವೀಣ್ ಕುಮಾರ್ ಅವರು ತಿಳಿಸಿದರು.

ಕಾಳಿಕಾಂಬ ದೇವಾಲಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಜರುಗಿದ ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪರಾಭವ ನಾಮ ಸಂವತ್ಸರವು ಒಟ್ಟು 60 ಸಂವತ್ಸರಗಳಲ್ಲಿ 40ನೇ ಸಂವತ್ಸರವಾಗಿದೆ. ಈ ವರ್ಷದ ರಾಜ ಗುರು ಆಗಿದ್ದು ಮಂತ್ರಿ ಕುಜ ಆಗಿದ್ದಾನೆ. ಗುರು, ಶನಿ, ರಾಹು ಮತ್ತು ಕೇತು ಗ್ರಹಗಳ ಸಂಚಾರದಲ್ಲಿ ಪ್ರಮುಖ ಬದಲಾವಣೆಗಳಾಗಲಿವೆ ಎಂದರು.

ಗುರು ಗ್ರಹವು ಜೂನ್ 2 ರಿಂದ ಕರ್ಕಾಟಕ ರಾಶಿಗೆ ಪ್ರವೇಶಿಸಿ ಅ.31 ರಂದು ಸಿಂಹ ರಾಶಿಗೆ ಮತ್ತು ಜನವರಿಯಲ್ಲಿ ಮತ್ತೆ ಕರ್ಕಾಟಕ ರಾಶಿಗೆ ಮರಳಲಿದೆ. ಶನಿ ಗ್ರಹವು ಮಾರ್ಚ್ ವರೆಗೆ ಮೀನ ರಾಶಿಯಲ್ಲಿರಲಿದೆ. ರಾಹು ಮತ್ತು ಕೇತುಗಳು ಡಿಸೆಂಬರ್



ನಲ್ಲಿ ಮಕರ ಮತ್ತು ಕರ್ಕಾಟಕ ರಾಶಿಗಳಿಗೆ ಸ್ಥಾನ ಬದಲಾಯಿಸಲಿದೆ ಎಂದು ಹೇಳಿದರು.

ಕಮಟೇಶ್ವರಸ್ವಾಮಿಗೆ ರುದ್ರಾಭಿಷೇಕ, ಕಾಳಿಕಾಂಬೆಗೆ ಪಂಚಾಮೃತ ಅಭಿಷೇಕ ಸೇವೆ ಮಾಡಿ ವಿಶೇಷ ಅಲಂಕಾರ ಮಾಡಲಾಗಿತ್ತು. ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಹೆಚ್.ವಿ.ಹರೀಶ್, ತಾಲ್ಲೂಕು ಉಪಾಧ್ಯಕ್ಷ ಬ್ಯಾಟರಂಗಾಚಾರ್, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್.ಆನಂದ್, ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎನ್.ದಿನೇಶ್, ನಿರ್ದೇಶಕರಾದ ಬಿ.ಲೋಕೇಶ್, ರುಕ್ಮಾಂಗದ ಚಾರ್, ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಪ್ರೊ. ವಸಂತಕುಮಾರ್ ಮತ್ತು ಶಕುಂತಲಾ ಆಚಾರ್ಯ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019